# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ** **ಮಾರ್ಚ್ 1-31 2017**

KANNADA MONTHLY MARCH 1-31 2017

ಸಂಪುಟ 2, ಸಂಚಿಕೆ 7 ಪುಟ : 24, ಬೆಲೆ : ರೂ. 5–00

Vol. 2, Issue 7, Pages: 24, Price : Rs. 5-00

ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444



## ಒಳಪುಟಗಳಲ್ಲಿ...

ವಚನ ಸಾಹಿತ್ಯದಲ್ಲಿ ಮಹಿಳೆಯರು **Pg. No. 5**

21ನೆಯ ಶತಮಾನದಲ್ಲಿ ಮಹಿಳೆ **Pg. No. 8**

ಚೋಟಾಳಿಗೊಬ್ಬ ಮೋಟಾಳು **Pg. No. 16**

ನಾರಿ ನಿನಗೊಂದು ಸ್ಸಾರಿ **Pg. No. 17**

ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ **Pg. No. 20**

ಸ್ಫೂರ್ತಿ ಮಹಿಳಾಮಣಿಗಳು **Pg. No. 22**

**ನಾಡಿನ ಜನತೆಗೆ ಮಹಿಳಾ ದಿನಾಚರಣೆ**

**ಹಾಗೂ ಯುಗಾದಿ ಹಬ್ಬದ ಶುಭಾಶಯಗಳು**



# 16-3-2017ರಂದು ಕಳಲೆ ಜಾತ್ರೆ





ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ಜಾತ್ರೆ ದಿನಾಂಕ 16-3-2017ರಂದು ನಡೆಯಲಿದೆ. ಪ್ರತಿ ವರ್ಷದಂತೆ ಜಾತ್ರೆ ಹಾಗೂ ರಾತ್ರಿಯ ತೇರಡಿ ಉತ್ಸವಕ್ಕೆ ಭಕ್ತಾದಿಗಳು ಸಕಾಲದಲ್ಲಿ ಬಂದು ದೇವರ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನದ ಪಾರುಪತ್ತೇಗಾರರಾದ ಶ್ರೀ ಜಯರಾಂ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನನ್ನ ಮಾತು



ಅಕ್ಕಮಹಾದೇವಿ, ಮುಕ್ತಾಯಕ್ಕನಂತಹ ಮಹಾಮೇಧಾವಿ ಅನುಭಾವಿಗಳಿಂದ ಹಿಡಿದು, ಸಮಾಜದ ಕೆಳಸ್ತರಗ'ಳಿಂದ ಬಂದ ಅಕ್ಕನಾಗಮ್ಮ, ಅಕ್ಕಮ್ಮ, ದುಗ್ಗಳೆ, ಗೊಗ್ಗವ್ವೆ, ದೋಸೆ ಪೆದ್ದವ್ವೆ, ಸೂಳೆ ಸಂಕವ್ವೆ, ಕೇತಲದೇವಿ, ಸತ್ಯಕ್ಕ, ಗುಡ್ಡವ್ವೆ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ಹೀಗೆ ಇನ್ನೂ ಅನೇಕ ಮಹಿಳೆಯರು ಸಾಂಸ್ಕೃತಿಕ ಆಂದೋಲನದ ಭಾಗವಾಗಿ ಸಾಹಿತ್ಯ ರಚನೆಯಲ್ಲಿತಮ್ಮನ್ನು ತೊಡಗಿಸಿಕೊಂಡು ವಚನ ಸಾಹಿತ್ಯಕ್ಕೆ ತಮ್ಮ ಬಳುವಳಿಯನ್ನು ಕೊಟ್ಟಿರುತ್ತಾರೆ.

12ನೇ ಶತಮಾನದಲ್ಲಿ ಮಹಿಳೆಗೆ ಯಾವುದೇ ಸಂಸ್ಕಾರವಿರಲಿಲ್ಲ. ಮಹಿಳೆ ಯರಿಗೆ ಎಲ್ಲಾ ಜ್ಞಾನದ, ಕಲಿಕೆಯ ಬಾಗಿಲು ಮುಚ್ಚಿದ್ದವು. ಶಿಕ್ಷಣದ ಅವಕಾಶಗಳೇ ಇರಲಿಲ್ಲ. ಅಂತಹ ಕಾಲಘಟ್ಟದಲ್ಲಿ ಮಹಾನ್ ವೈರಾಗ್ಯ ಚಕ್ರವರ್ತಿನಿಯಾದ ಮಹಾಸಾಧ್ವಿ ಅಕ್ಕಮಹಾದೇವಿ ಯವರು ಅಂತರ್ ಜಗತ್ತಿನ ಆಧ್ಯಾತ್ಮ ಜ್ಞಾನ ದರ್ಶನವನ್ನು ಜಗತ್ತಿಗೆ ನೀಡಿದರು. ಸ್ತ್ರೀ ಮತ್ತು ಪುರುಷ ಯಾರೂ ಹೆಚ್ಚಲ್ಲ ಯಾರೂ ಕಡಿಮೆ ಯಲ್ಲ. ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ಸಾಧನೆ ಮಾಡುತ್ತಾರೆ. ಆದರೆ ಮಹಿಳೆಗೆ ಸಮಾಜ ಉತ್ತಮ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಸಂವಿಧಾನ ಅವಕಾಶಗಳನ್ನು ಕಲ್ಪಿಸಿದ್ದರೂ ಆಚರಣೆಯಲ್ಲಿಲ್ಲ.

ಈ ಸಂಚಿಕೆಗೆ ಸೇವಾ ಸ್ಮರಣ ಪ್ರತಿಷ್ಠಾನ ಸಹಕಾರ ನೀಡಿದ್ದಕ್ಕಾಗಿ ಧನ್ಯವಾದಗಳು. ಈ ತಿಂಗಳಲ್ಲಿ ಬರುವ ಮಹಿಳಾ ದಿನಾಚರಣೆ ಹಾಗೂ ಯುಗಾದಿ ಹಬ್ಬದ ಪ್ರಯುಕ್ತ ನಾಡಿನ ಜನತೆಗೆ ನಮ್ಮ ಜಾಹೀರಾತುದಾರರಿಗೆ ಸ್ನೇಹಿತರಿಗೆ ಹಿತೈಷಿಗಳಿಗೆ ಹಾರ್ದಿಕ ಶುಭಾಶಯಗಳು.

***ಸಂಪಾದಕ***
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ


**ಮಹಿಳಾ ವಿಶೇಷ**
MAHILA VISHESHA
**ಕನ್ನಡ ತಿಂಗಳ ಪತ್ರಿಕೆ**

**ಮಾರ್ಚ್, 1-31 2017**

KANNADA MONTHLY

MARCH 1-31 2017

ಸಂಪುಟ 2, ಸಂಚಿಕೆ 7, ಪುಟ: 24
Price/ಬೆಲೆ : ರೂ. 5–00
Vol. 2, Issue 7, Pages: 24

ಮುಖಪುಟ:
**ಕಳಲೆ ಶ್ರೀ ಲಕ್ಷ್ಮೀಕಾಂತಸ್ವಾಮಿ ಉತ್ಸವ ಮೂರ್ತಿ**

ಗೌರವ ಸಂಪಾದಕರು:
**ಶ್ರೀಮತಿ ಸತ್ಯಭಾಮಾ ದಾಸ್**
**ಶ್ರೀಮತಿ ಗೀತಾ ರಾವ್**

ಸಂಪಾದಕರು:
**ಹೆಚ್.ವಿ. ವೆಂಕಟಸುಬ್ಬರಾವ್**
ಮೊಬೈಲ್ 88803–34444

ಉಪಸಂಪಾದಕರು:
**ಎಸ್.ವೆಂಕಟರವಣಪ್ಪ**
**ಸಾವಿತ್ರಿ**

ಕಛೇರಿ ವಿಳಾಸ:
ನಂ. 136, ಶ್ರೀ ನೀಲಕಂಠ ಮಠ,
ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲ,
ಮೈಸೂರು–570 004.
E-mail: mahilavishesha@yahoo.com
Web: www.mahilavishesha.in






# ಮಹಿಳೆಯರೇ ನಿಮ್ಮ ಸುರಕ್ಷತೆ ನಿಮ್ಮ ಕೈಯಲ್ಲೇ ಇದೆ! ಸ್ನೇಹ ಎಲ್ಲೆ ಮೀರದಿರಲಿ

ಶೈಕ್ಷಣಿಕ ಅವಕಾಶಗಳು ಹೆಚ್ಚಿರುವುದು ಹಾಗೂ ಸಾಮಾಜಿಕ ಬದಲಾವಣೆಗಳಿಂದಾಗಿ ಇಂದಿನ ದಿನಗಳಲ್ಲಿ ಹುಡುಗ-ಹುಡುಗಿಯರಲ್ಲಿ ಸ್ನೇಹ ಸಹಜವೇ ಆಗಿದೆ. ಆಧುನಿಕ ಕುಟುಂಬಗಳು ಇದನ್ನು ತಪ್ಪು ಎಂದು ತಿಳಿಯುವುದಿಲ್ಲ. ಆದರೆ ಒಂದು ಸಂಗತಿ ಗಮನದಲ್ಲಿರಲಿ. ಸ್ನೇಹ ಅಂದರೆ ನಿಸ್ವಾರ್ಥದಿಂದ ಕೂಡಿದ್ದಾಗಿರಬೇಕು. ಸಹಾಯ ಮಾಡುವ ಮನೋಭಾವ ಇರಬೇಕು. ಆದರೆ ಬಹಳಷ್ಟು ಹುಡುಗರು ಸ್ನೇಹವನ್ನು ಸೆಕ್ಸ್ ಜೊತೆಗೆ ಲಿಂಗ್ ಮಾಡಿ ನೋಡುತ್ತಾರೆ. ಹುಡುಗರ ಜೊತೆಗೆ ಸ್ನೇಹ ಮಾಡುವಾಗ ಕೆಳಕಂಡ ಸಂಗತಿಗಳ ಬಗ್ಗೆ ಅವಶ್ಯವಾಗಿ ಗಮನ ಕೊಡಿ.

ಆರಂಭದಲ್ಲಿಯೇ ಸ್ನೇಹಿತನ ಜೊತೆ ಹೆಚ್ಚು ಮುಕ್ತವಾಗಿ ವರ್ತಿಸದಿರಿ. ನಿಮ್ಮ ಕುಟುಂಬದ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಅವನ ಮುಂದೆ ಹೇಳಿಬಿಡುವುದು ಸರ್ವಥಾ ಒಳ್ಳೆಯದಲ್ಲ. ಯೋಚಿಸಿ, ವಿಚಾರ ವಿಮರ್ಶೆ ಮಾಡಿ ಮುಂದುವರಿಯುವುದು ಒಳ್ಳೆಯದು.

ಆರಂಭದಲ್ಲಿಯೇ ನಿಮ್ಮ ಸ್ನೇಹತ ಇತಿಮಿತಿ ಸ್ಪಷ್ಟಪಡಿಸುವುದು ಒಳ್ಳೆಯದು.

ಸಂದರ್ಭ ಬಂದರೆ ಒಂದು ಸಲ ನಿಮ್ಮ ಸ್ನೇಹಿತನನ್ನು ಅಮ್ಮ-ಅಪ್ಪನಿಗೆ ಭೇಟಿ ಮಾಡಿಸಿ.

ನಿಮ್ಮ ಸ್ನೇಹಿತನ ಜೊತೆ ಯಾವುಆದರೂ ಏಕಾಂತದ ಸ್ಥಳಕ್ಕೆ ಹೋಗುವ ಅಪಾಯ ತಂದುಕೊಳ್ಳಬೇಡಿ. ಹಾಗೊಮ್ಮೆ ಹೋಗುವ ಪ್ರಸಂಗ ಬಂದರೆ ನಿಮ್ಮ ಪೋಷಕರಿಗೆ ಎಲ್ಲಿಗೆ ಹೋಗುತ್ತಿದ್ದೀರಿ, ಯಾವಾಗ ವಾಪಸ್ ಬರಬಹುದು ಎಂಬುದನ್ನು ನಿಮ್ಮ ಸ್ನೇಹಿತನ ಮುಂದೆಯೇ ತಿಳಿಸಿ. ಒಂದು ವೇಳೆ ನೀವು ಫೋನ್ ಮಾಡಿದ ಬಳಿಕ ಅವನು ಸ್ಥಳ ಬದಲಾಯಿಸಲು ನೋಡಿದರೆ ನೀವು ಆಗಲೇ ಎಚ್ಚರಗೊಳ್ಳಬೇಕು. ನೀವು ಏನಾದರೂ ನೆಪ ಹೇಳಿ ಅಲ್ಲಿಗೆ ಹೋಗದೇ ಇರುವಂತೆ ಮಾಡಿ.



ನಿಮ್ಮ ಹಾಗೂ ನಿಮ್ಮ ಪೋಷಕರ ಮೊಬೈಲ್‌ಗೆ ಜಿಪಿಎಸ್ ಹಾಗೂ ರೆಕಾರ್ಡಿಂಗ್ ಸಿಸ್ಟಮ್ ಡೌನ್‌ಲೋಡ್ ಮಾಡಿಕೊಳ್ಳಿ. ಬಹಳಷ್ಟು ಮೊಬೈಲ್‌ಗಳಲ್ಲಿ ಈ ಸೌಲಭ್ಯ ಮೊದಲೇ ಇನ್‌ಬಿಲ್ಟ್ ಆಗಿರುತ್ತವೆ.

# ವಚನ ಸಾಹಿತ್ಯದಲ್ಲಿ ಮಹಿಳೆಯರು

ಕನ್ನಡ ನಾಡು ನಡೆದು ಬಂದ ದಾರಿಯೇ ಆಗಲಿ ಅಥವಾ ಕನ್ನಡ ಸಾಹಿತ್ಯ ಚರಿತ್ರೆಯನ್ನೇ ಆಗಲಿ ಗಮನಿಸಿದಾಗ, ಮಹತ್ವದ ಮೈಲಿಗಲ್ಲಾಗಿ ನಿಲ್ಲುವುದು 12ನೆಯ ಶತಮಾನ. ಕಾರಣ ಈ ಕನ್ನಡದ ನೆಲ ಕಂಡ ಶ್ರೇಷ್ಠ ಸುಧಾರಕ, ಮಹಾ ಮಾನವತಾವಾದಿ ಬಸವಣ್ಣನವರ ನೇತೃತ್ವದಲ್ಲಿ ತೀವ್ರ, ಸಾಮಾಜಿಕ ಕಳಕಳಿಯಿಂದ ಕೂಡಿದ ಆಂದೋಲನವೊಂದು ಆರಂಭವಾಯಿತು. ಮೇಲ್ನೋಟಕ್ಕೆ ಜ್ಞಾನ, ವೈರಾಗ್ಯ, ಆಧ್ಯಾತ್ಮವೆನಿಸಿದರೂ ಈ ಚಳುವಳಿ ಆತ್ಮತಃ ಸಮಾಜಮುಖಿಯಾಗಿತ್ತು. ನಮ್ಮ ಸಮಾಜದಲ್ಲಿ ಆವರೆಗೂ ಅಂಟಿಕೊಂಡಿದ್ದ ಅಸಮಾನತೆಯ ಪಿಡುಗನ್ನು ತೊಡೆದುಹಾಕುವ ಆಶಯದೊಂದಿಗೆ ಈ ಚಳವಳಿ ಆರಂಭವಾದರೂ ಕೇವಲ ಅಷ್ಟಕ್ಕೆ ಮಾತ್ರ ಸೀಮಿತವಾಗದೆ ಸಾಹಿತ್ಯಕ ಕ್ರಾಂತಿಯೊಂದಕ್ಕೆ ಹೇತುವಾಯಿತು. ಜಾತಿ, ವರ್ಗ, ವರ್ಣ, ಲಿಂಗಭೇದಗಳನ್ನು ತೊಡೆಯುವ ಪ್ರಯತ್ನಗಳ ಜೊತೆಯಲ್ಲೇ, ಆವರೆಗೂ ಚಂಪೂಶೈಲಿಯಲ್ಲೋ, ಹಳೆಗನ್ನಡದಲ್ಲೋ ಇದ್ದು, ಸಾಮಾನ್ಯರಿಗೆ ಅಲಭ್ಯವಾದ, ಪಂಡಿತರಿಗೆ ಮಾತ್ರವಿದ್ದ ಸಾಹಿತ್ಯ ಪ್ರಕಾರಗಳು ಹಳೆಗನ್ನಡದಿಂದ ನಡುಗನ್ನಡಕ್ಕೆ ಮುಕ್ತ ಛಂದಸ್ಸಿನಲ್ಲಿ, ಪಾಮರರಿಗೂ ಸುಲಭವಾಗುವಂತಹ ನಡುಗನ್ನಡ ಭಾಷೆಗೆ ಇಳಿದುಕೊಳ್ಳತೊಡಗಿತು. ಛಂದಸ್ಸಿನ ಹಂಗಿಲ್ಲದಿದ್ದರೂ ನೀರಸ ಶುಷ್ಕವಾಗಿರದೆ ಅಪೂರ್ವ ಸಾಹಿತ್ಯಕ ಮೌಲ್ಯಗಳುಳ್ಳ 'ವಚನ ಸಾಹಿತ್ಯ'ವಾಗಿ ರೂಪು ಪಡೆಯಿತು. ಭಾರತದ ಬೇರೆ ಯಾವ ಭಾಷೆಯಲ್ಲೂ ಇಲ್ಲದ, ಅಮೂಲ್ಯ ಶ್ರೀಮಂತ ವಚನ ಸಾಹಿತ್ಯವು ಕನ್ನಡದ ಘನತೆ, ಶ್ರೀಮಂತಿಕೆಯನ್ನು ಹೆಚ್ಚಿಸುತ್ತಲೇ ವಿಶ್ವಸಾಹಿತ್ಯದಲ್ಲಿ ಕನ್ನಡಕ್ಕೆ ಶಾಶ್ವತವಾದ ನೆಲೆಯೊಂದನ್ನು ದೊರಕಿಸಿಕೊಟ್ಟಿತು.

ಈ ಯುಗದ ವೈಶಿಷ್ಟ್ಯವೆಂದರೆ ಈ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಆಂದೋದನಲ್ಕೆ ಮಹಿಳೆಯರು ಸಕ್ರಿಯವಾಗಿ ಸೇರ್ಪಡೆಯಾಗಿರುವುದು. ಶ್ರೇಷ್ಠ ವಚನದ ಸಾಹಿತ್ಯ ಹರಿಕಾರರಾದ ಶರಣ ಸಂದೋಹ ಕೇವಲ ಪುರುಷದ ನಿರ್ಮಿತಿಯಾಗಿರಲಿಲ್ಲ. ಸ್ತ್ರೀಯರೂ ಸಕಾರಾತ್ಮಕವಾಗಿ ಈ ಆಂದೋಲನದಲ್ಲಿ ಸೇರ್ಪಡೆಯಾದರು.

ಅಕ್ಕಮಹಾದೇವಿ, ಮುಕ್ತಾಯಕ್ಕನಂತಹ ಮಹಾಮೇಧಾವಿ ಅನುಭಾವಿಗಳಿಂದ ಹಿಡಿದು, ಸಮಾಜದ ಕೆಳಸ್ತರಗಳಿಂದ ಬಂದ ಅಕ್ಕನಾಗಮ್ಮ, ಅಕ್ಕಮ್ಮ, ದುಗ್ಗಳೆ, ಗೊಗ್ಗವ್ವೆ, ದೋಸೆ ಪೆದ್ದವ್ವೆ, ಸೂಳೆ ಸಂಕವ್ವೆ, ಕೇತಲದೇವಿ, ಸತ್ಯಕ್ಕ, ಗುಡ್ಡವ್ವೆ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ಹೀಗೆ ಇನ್ನೂ ಅನೇಕ ಮಹಿಳೆಯರು ಈ ಸಾಂಸ್ಕೃತಿಕ ಆಂದೋಲನದ ಭಾಗವಾಗಿ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ವಚನ ಸಾಹಿತ್ಯಕ್ಕೆ ತಮ್ಮ ಬಳುವಳಿಯನ್ನು ಕೊಟ್ಟರು. ಒಟ್ಟಾಗಿ ಸುಮಾರು 25ರಿಂದ 30 ಮಂದಿ ಮಹಿಳೆಯರು ಸಾಹಿತ್ಯ ರಚನೆ ಮಾಡಿದ ಸಂದರ್ಭ, ಆಧುನಿಕ ಸಂದರ್ಭವನ್ನು ಹೊರತುಪಡಿಸಿದರೆ ಇತಿಹಾಸದ ಯಾವ ಕಾಲಘಟ್ಟದಲ್ಲೂ ಸಿಗುವುದಿಲ್ಲ. ಈ ಯುಗ ವಿಶಿಷ್ಟವಾಗುವುದು ವಚನಗಾರ್ತಿಯರ ಸಂಖ್ಯಾ ಬಾಹುಳ್ಯದಿಂದಲ್ಲ. ಪುರುಷರ ಸಮನಾಗಿ ನಿಂತು ರಚಿಸಿದ ವಚನಗಳು ಅವುಗಳ ಸತ್ವ, ಸಾಹಿತ್ಯಲೋಕಕ್ಕೆ ಅವುಗಳ ಮಹತ್ವದಿಂದ ಇಡೀ ಸ್ತ್ರೀ ಸಮುದಾಯವನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದ ಭಾರತೀಯ ಸನ್ನಿವೇಶವನ್ನು ಬುಡಮೇಲಾಗಿರುವ ಸ್ತ್ರೀಯೂ ಆತ್ಮವಂತಳು, ಅವಳಿಗೂ ಜ್ಞಾನ ಆಧ್ಯಾತ್ಮದ ಚಿಂತನೆಯ ಅರ್ಹತೆ ಅಧಿಕಾರಗಳಿವೆ ಎಂಬ ತತ್ವವನ್ನು ಢಾಳಾಗಿ ಕಾಣಿಸುವ ಸ್ತ್ರೀಪರ ಧ್ವನಿಯೊಂದನ್ನು ರೂಪಿಸಿದ ಕೀರ್ತಿ 12ನೆಯ ಶತಮಾನದ ವಚನಕಾರ್ತಿ ಶರಣೆಯರಿಗೆ ಸಲ್ಲುತ್ತದೆಯೆಂದರೆ ಅತಿಶಯೋಕ್ತಿಯಲ್ಲ.

*ಶ್ರೀಮತಿ ಉಷಾ ನರಸಿಂಹನ್, ಮೈಸೂರು*



# ಅಕ್ಷರಸ್ಥರೇ ಪ್ರಜಾಪ್ರಭುತ್ವಕ್ಕೆ ಸವಾಲು?!

ಒಂದು ಕಾಲದಲ್ಲಿ ಸಮಾಜದಲ್ಲಿ ಜಾತಿ, ಮತ, ವರ್ಗ ಭೇದ ಇತ್ತು. ಶಿಕ್ಷಣ ಪಡೆದ ಮೇಲ್ವರ್ಗದ ಜನ ಅನಕ್ಷರಸ್ಥರನ್ನು ಶೋಷಣೆ ಮಾಡುತ್ತಿದ್ದರು. ಜೀತದಾಳುಗಳನ್ನಾಗಿಸುತ್ತಿದ್ದರು. ಅಲ್ಪ ಪ್ರಮಾಣದ ಸಾಲ ಕೊಟ್ಟರೂ ಅದನ್ನು ಹಿರಿದು ಮಾಡಿ ಮೋಸದಿಂದ ಸಹಿ ಪಡೆದು ಆಸ್ತಿ ನುಂಗುತ್ತಿದ್ದರು. ಇನ್ನೇನೇನೋ ಕಸರತ್ತು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಜನ ''ವಿದ್ಯಾಹೀನಂ ಪಶುಸಮಾನಂ'' ಎಂಬ ಗಾದೆ ಮಾತಿನಂದೆ ಸತ್ಯ ತಿಳಿದು ವಿದ್ಯಾವಂತರಾಗಬೇಕೆಂದು ಆಲೋಚಿಸುತ್ತಿದ್ದರು. ಬಹುಶಃ ಆ ಕಾಲದಲ್ಲಿ ಅನಕ್ಷರಸ್ಥರೇ ಈ ದೇಶಕ್ಕೆ ಸವಾಲಾಗಿದ್ದರು. ಆ ಸಂದರ್ಭದಲ್ಲಿ ನಮ್ಮ ದೇಶ ಪ್ರಜಾಪ್ರಭುತ್ವ ರಾಷ್ಟ್ರವಾಯಿತು.

ಪ್ರಜಾಪ್ರಭುತ್ವ ಎಂಬ ಪದ ಇಂಗ್ಲೀಷಿನ 'ಡೆಮಾಕ್ರಸಿ'ಯಿಂದ ಬಂದುದಾಗಿದೆ. ಇದು ಗ್ರೀಕಿನ ಡೆಮಾಸ್ (ಜನರು), ಕ್ರಿಷಿಯಾ (ಅಧಿಕಾರ) ಎಂಬ ಪದಗಳಿಂದ ಒಡಮೂಡಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಪ್ರಜಾಪ್ರಭುತ್ವ ಎಂದರೆ ಪ್ರಜೆಗಳೇ ಪ್ರಭುಗಳು ಅಥವಾ ಜನರ ಅಧಿಕಾರ ಎಂದರ್ಥ.

ಪ್ರಜಾಪ್ರಭುತ್ವ ರಾಷ್ಟ್ರ ಎಂದ ಮೇಲೆ ಅಲ್ಲಿ ಸ್ವಾತಂತ್ರ್ಯ ಇರುತ್ತದೆ. ಪ್ರತಿಯೊಬ್ಬರಿಗೂ ಶಿಕ್ಷಣ ಪಡೆಯುವ ಹಕ್ಕು ಇದೆ. ಅದು ಆಗ್ತಾ ಇದೆ. ಬಹುತೇಕ ಈಗ ಹಿಂದಿನ ಸಮಸ್ಯೆಗಳು ಮಾಯವಾಗಿವೆ. ಅಕ್ಷರಸ್ಥರ ಸಂಖ್ಯೆ ಬೆಳೆಯುತ್ತಿದೆ. ಆದರೆ ಇಂದು ಇವರೇ ಪ್ರಜಾಪ್ರಭುತ್ವಕ್ಕೆ ಸವಾಲಾಗಿದ್ದಾರೆ.

ಅಕ್ಷರಸ್ಥರು ತಪ್ಪು ದಾರಿಗೇಕೆ ಇಳಿಯುತ್ತಾರೆ ಎನ್ನುವುದು ಇಂದಿನ ದೊಡ್ಡ ಪ್ರಶ್ನೆ. ಮಕ್ಕಳು ಇಂತಹುದೇ ಉದ್ಯೋಗವನ್ನು ಪಡೆಯಬೇಕು ಎಂದು ಸೀಮಿತಗೊಳಿಸಿ ಅದಕ್ಕಾಗಿ ಮಾತ್ರ ಓದಿಸಿದ್ದಲ್ಲಿ ತಪ್ಪಾಗುವುದೇ ಹೆಚ್ಚು. ಆ ಉದ್ಯೋಗ ಸಿಗದಿದ್ದಲ್ಲಿ ಇಷ್ಟು ವಿದ್ಯಾರ್ಹತೆಯನ್ನು ಪಡೆದವರು ಬೇರೆ ಉದ್ಯೋಗ ಮಾಡಲು ಮನಸ್ಸಿಲ್ಲದೆ, ನಿರುದ್ಯೋಗಿಯಾಗಿರುತ್ತಾರೆ. ಆ ಸಂದರ್ಭದಲ್ಲಿ ಯಾರದೋ ಮಾತು ಕೇಳಿ ಸರಕಾರದ ವಿರುದ್ಧ ಸಿಡಿದೆದ್ದು ಯಾವುದೋ ಭಯೋತ್ಪಾದಕ ಸಂಘಟನೆಗಳ ಜೊತೆಯಾಗಿ ಆತನೂ ಭಯೋತ್ಪಾದಕನಾದ ಘಟನೆ ಭಾರತದಲ್ಲಿ ಒಂದೆರಡಲ್ಲ!

ಇಂದು ಸರ್ಕಾರಿ ಅಧಿಕಾರಿಯಾಗಬೇಕಾದರೆ ಆ ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆಯನ್ನು ಹೊಂದಿರಲೇಬೇಕು. ಹಾಗೂ ಹೆಚ್ಚಿನ ಎಲ್ಲಾ ರಾಜಕಾರಣಿಗಳು ಕೂಡಾ ಉನ್ನತ ಶಿಕ್ಷಣವನ್ನು ಹೊಂದಿರುತ್ತಾರೆ. ಆದರೆ ಇಂದು ಅತೀ ಹೆಚ್ಚು ಭ್ರಷ್ಟಾಚಾರದಲ್ಲಿ ಸಿಲುಕಿಕೊಂಡ ತಿಮಿಂಗಿಲಗಳು ಈ ಅಕ್ಷರಸ್ಥರೇ!

ಈ ಭೂಮಿಗೆ ತಾನು ತಂದುದಾಗಲಿ, ಕೊಂಡು ಹೋಗುವುದಾಗಲೀ ಏನೂ ಇಲ್ಲ ಎಂದು ತಿಳಿದರೂ ಸ್ವಾರ್ಥಕ್ಕಾಗಿ ಕಡಿಯುವ, ಬಡಿಯುವ, ಕೊಲ್ಲುವ ಚಿತ್ರಣಗಳು ಈ ಸಮಾಜದಲ್ಲಿ ಆಗುತ್ತಿರುವುದು ವಿಷಾದಕರ.

ಹಿಂದೆ ಹಳ್ಳಿ ಶಾಂತಿ, ಸಾಮರಸ್ಯದ ನೆಲೆಯಾಗಿತ್ತು. ಅಲ್ಲಿ ಜಾತಿ, ಮತ ಮರೆತ ನೈತಿಕ ವಾರಸುದಾರಿಕೆ ಇತ್ತು. ಸಹಾಯ ಪರೋಪಕಾರದ ಮುಕ್ತ ಮನಸ್ಸುಗಳಿದ್ದವು. ದೇಸೀ ಸಂಸ್ಕೃತಿಯ ಸೊಗಸು ಇತ್ತು. ಅದರಿಂದಾಗಿಯೇ ಗಾಂಧೀಜಿಯ 'ರಾಮರಾಜ್ಯದ ಪರಿಕಲ್ಪನೆ ಹುಟ್ಟಿರುವುದೇ ಹಳ್ಳಿಗಳಲ್ಲಿ'. ಆ ಹಳ್ಳಿಗರು ಶಾಲೆಗಳಿಗೆ ಹೋದವರಲ್ಲ, ಅಕ್ಷರ ಕಲಿತವರಲ್ಲ. ಆದರೆ ಇಂದು ಅದೇ ಹಳ್ಳಿಯ ಜನರು ಅಕ್ಷರಸ್ಥರು, ಹಳ್ಳಿಯ ಮಧ್ಯದಲ್ಲಿ ಹೈವೇ ಆಗಿದೆ. ಪೇಟೆ ಪಟ್ಟಣ ಆಗಿದೆ. ಗದ್ದೆಗಳ ಮೇಲೆ ಕಾಂಕ್ರೀಟ್ ಕಟ್ಟಡ ನಿಂತಿದೆ. ಅದರ ಪಕ್ಕದಲ್ಲಿ ಅದೆಷ್ಟೋ ಟವರ್‌ಗಳು ಮೊಳಕೆಯೊಡೆದಿವೆ. ಎರಡು ಮನೆಗಳ ಮಧ್ಯೆ ಕಾಂಪೌಂಡ್ ಕಟ್ಟಿದ್ದಾರೆ. ಅವರವರ ಮನೆಯ ಎದುರು ಮತದ ಬಾವುಟ ಹಾರುತ್ತದೆ. ಶುಚಿ ಇದ್ದ ಕೆರೆ ಕೊಳಚೆ ಗುಂಡಿಯಾಗಿದೆ. ಗದ್ದೆಯಿಂದ ನೀರು ಹೋಗುತ್ತಿದ್ದ ಕಣಿ ಚರಂಡಿಯಾಗಿದೆ. ಸ್ಮಶಾನದಿಂದ ಹೊಗೆ ಬರುವಂತೆ ಎಲ್ಲಾ ಕಡೆಯಿಂದಲೂ ಹೊಗೆ ಬರುತ್ತಿದೆ. ಎದುರೆದುರಾದರೂ ಪರಿಚಯವಿಲ್ಲದವರಂತೆ ನಟನೆ ಎಲ್ಲಾ ಬಿಟ್ಟು ಆಚೆ ಮನೆಯಲ್ಲಾದ ಮದುವೆ ಈಚೆ ಮನೆಯವರಿಗೆ ಗೊತ್ತೇ ಇಲ್ಲ! ಯಾಕೆ ಹೀಗೆ? ಅಂದರೆ ನಮ್ಮ ಶಿಕ್ಷಣ ವ್ಯವಸ್ಥೆ ಸರಿ ಇಲ್ಲವೇ? ಇದು ವಿದ್ಯಾವಂತರಲ್ಲಿ ವಿಷಬೀಜ ಬಿತ್ತುತ್ತಿದೆಯೇ? ಈ ಜನ ಶಿಕ್ಷಣವನ್ನು ಸ್ವೀಕಾರ ಮಾಡುವುದರಲ್ಲಿ ತಪ್ಪಾಗುತ್ತಿದೆಯೆ? ಎಂಬ ಪ್ರಶ್ನೆ ಬರುವುದು ಸಹಜ.

'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆ ಮಾತಿನಂತೆ ಅರ್ಧಂಬರ್ಧ ಜ್ಞಾನದಲ್ಲಿ ತಪ್ಪಾಗಿದೆ. ಹೆಚ್ಚಿನ ಅಧ್ಯಯನ ನಡೆಸಿದವರಿಂದಾಗಲೀ ಏನೂ ಕಲಿಯದವರಿಂದಾಗಲೀ ತೊಂದರೆಯಾಗಲಿಲ್ಲ. ಇದಕ್ಕೆ ನಮ್ಮೆದುರೇ ಅದೆಷ್ಟೋ ಉದಾಹರಣೆಗಳಿವೆ. ಅರ್ಧ ಜ್ಞಾನ ಪಡೆದು ತಾನೇ ಶ್ರೇಷ್ಠರು ಎಂದು ಬೀಗುವವರಿಂದ ತೊಂದರೆ ಉಂಟಾಗುವುದು. ಪ್ರತಿಯೊಂದು ಉದ್ಯೋಗಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆ. ಅದರಲ್ಲಿ ಉಚ್ಚ-ನೀಚ ಎಂಬ ವಿಚಾರ ಬರುವುದೇ ಇಲ್ಲ. ಸ್ವಾರ್ಥದ ತಾಂಡವ ಕುಣಿತದಿಂದಲೋ ಅಥವಾ ತಾನು ಇಷ್ಟು ಓದಿ ಈ ಕೀಳು ಉದ್ಯೋಗ ಮಾಡಬೇಕಾ? ಎಂದು ಆಲೋಚನೆ ಮಾಡುವವರಿಂದಲೇ ಈ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಸವಾಲು. ಹಾಗೂ ತಪ್ಪು ಮಾಡುವವರೂ ಇಂತಹವರೇ.

ಇವುಗಳನ್ನು ಮೆಟ್ಟಿ ನಿಲ್ಲುವ, ಸ್ವಾರ್ಥಿಗಳಾಗದೇ ನೈಜ ವ್ಯಕ್ತಿತ್ವ ನಿರ್ಮಾಣದ ಶಿಕ್ಷಣವು ವಿದ್ಯಾರ್ಥಿ ಜೀವನದಿಂದಲೇ ತಿಳಿಸಿಕೊಡಬೇಕಾಗಿದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಶಿಕ್ಷಣದ ಆದರ್ಶಗಳನ್ನು ಹೇಳುವ ಅದೆಷ್ಟೋ ವ್ಯಕ್ತಿಗಳಿದ್ದಾರೆ, ಪುಸ್ತಕಗಳಿವೆ. ಆದರೂ ನಮ್ಮ ಗೊಂದಲ ನೂರು ಪಟ್ಟು ಹೆಚ್ಚಿದೆ. ವಿದ್ಯಾರ್ಥಿಗಳಿಗೆ ಪ್ರೀತಿ, ವಿಶ್ವಾಸಗಳು ತುಂಬಿದ ಪರಿಸರವನ್ನು ನೀಡಬೇಕು. ಇಲ್ಲಿನ ಜನಪದಕ್ಕೆ ನೈಜ ಇತಿಹಾಸಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಮೂಡಿಸಬೇಕು. ಅದು ಇನ್ನೂ ಈ ಪ್ರಜಾಪ್ರಭುತ್ವ ರಾಷ್ಟ್ರ ಭಾರತದಲ್ಲಿ ಆಗಬೇಕಾಗಿದೆ.

– ಪವಿತ್ರ, ಮೈಸೂರು





# 21ನೆಯ ಶತಮಾನದಲ್ಲಿ ಮಹಿಳೆ

**ಮಹಿಳೆ ಅಂದು:**

ಪಿತಾ ರಕ್ಷತಿ ಕೌಮಾರ್ಯೋ ಭರ್ತಾ । ರಕ್ಷತಿ ಯೌವ್ವನೆ ವಾರ್ಧಕ್ಯೇ ಪುತ್ರ । ಪೌತ್ರಾಶ್ಚನ ಸ್ತ್ರೀ ಸ್ವಾತಂತ್ರ್ಯಮರ್ಹತಿ.

ಮನುಸ್ತುತಿ

ಹೆಣ್ಣು ಬಾಲ್ಯದಲ್ಲಿ ತಂದೆಯಿಂದ, ಯೌವ್ವನದಲ್ಲಿ ಗಂಡನಿಂದ, ವೃದ್ಧಾಪ್ಯದಲ್ಲಿ ಪುತ್ರನಿಂದ ರಕ್ಷಣೆಯನ್ನು ಪಡೆಯುವಳು. ಅದಕ್ಕಾಗಿಯೇ ಮನು ಸ್ತ್ರೀಯರು ಪರರ ಅಧೀನರು, ಸ್ವಾತಂತ್ರ್ಯ ಹೊಂದಿರುವುದಕ್ಕೆ ಅರ್ಹರಲ್ಲ ಎಂದು ಕಟುವಾಗಿ ಹೇಳಿದ್ದಾನೆ. ಮನು ಒಂದರ್ಥದಲ್ಲಿ ಸ್ತ್ರೀಯ ದ್ವೇಷಿಯಾಗಿರಲಿಲ್ಲವೆಂದು ಹೇಳಬಹುದು.

ಮನು ಸ್ತ್ರೀಯರು ಪರರ ಅಧೀನರು ಎಂದು ಒಪ್ಪಿಕೊಂಡು ಸ್ವಲ್ಪ ಕಾಲಾನಂತರ ಯತ್ರ ನಾರ್ಯಸ್ತು ಪೂಜ್ಯಂತೇ । ತತ್ರ ರಮಂತೇ ದೇವತಾಃ ಯಾವ ನಾಡಿನಲ್ಲಿ ಮಹಿಳೆಯರು ಪೂಜಿಸಲ್ಪಡುತ್ತಾರೆಯೋ ಅಲ್ಲಿ ದೇವಾನುದೇವತೆಗಳು ವಾಸಿಸುತ್ತಾರೆ ಎಂದು ಹೇಳಿದೆ. ಅಂದಿನಿಂದ ಮಹಿಳೆಯರನ್ನು ಎಲ್ಲರೂ ಪೂಜ್ಯ ಭಾವನೆಯಿಂದ ಕಾಣಹತ್ತಿದರು. ಯಹೂದಿ ಕುರಾನಿನಲ್ಲಿ God could not be everywhere. Therefore he created mothers. ದೇವರಿಗೆ ಎಲ್ಲ ಕಡೆಗೂ ಇರಲಿಕ್ಕೆ ಸಾಧ್ಯವಾಗಲಿಲ್ಲವಂತೆ ಅದಕ್ಕೆ ತಾಯಂದಿರನ್ನು ಸೃಷ್ಟಿಸಿದ್ದಾನೆ ಎಂದು ಹೇಳಿದೆ.

ವೇದಕಾಲದಲ್ಲಿ ಮಹಿಳೆಯರು ಉಪನಯನಕ್ಕೆ ಅರ್ಹಳಾಗುತ್ತಿದ್ದಳು. ಬೌದ್ಧಕಾಲದಲ್ಲಿ ಮಹಿಳೆಯರು ಬೌದ್ಧ ಸಂಘಗಳಲ್ಲಿ ಬೌದ್ಧ ಭಿಕ್ಷುಣಿಯರಾಗಿದ್ದರು. ರಾಜ ಮಹಾರಾಜರ ಕಾಲದಲ್ಲಿ ಕಿತ್ತೂರ ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವ, ಬೆಳವಣಿ ಮಲ್ಲಮ್ಮ ಮುಂತಾದ ವೀರ ಹೋರಾಟಗಾರರು ಹೆಸರಾಗಿ ಹೋಗಿದ್ದಾರೆ. ಕೈಗಾರಿಕಾ ಕ್ರಾಂತಿ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಮಹಿಳೆಯರು ಪಾಲ್ಗೊಂಡಿದ್ದರು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಲ್ಲಿ 15 ಸಾವಿರ ಮಹಿಳೆಯರು ಭಾಗವಹಿಸಿ ಕೀರ್ತಿಯನ್ನು ಪಡೆದಿದ್ದಾರೆ.

**ಮಹಿಳೆ ಇಂದು:**

ಕೌಟುಂಬಿಕ ಜೀವನದಲ್ಲಿ, ಧಾರ್ಮಿಕ ಚಟುವಟಿಕೆಗಳಲ್ಲಿ ಸ್ತ್ರೀಯು ತಾಯಿ, ತಂಗಿ, ಸಹೋದರಿ, ಮಗಳು, ಹೆಂಡತಿ, ಅತ್ತೆಯಾಗಿ, ಸೊಸೆಯಾಗಿ ಪುರುಷನೊಂದಿಗೆ ಇದ್ದು ಸಹಕರಿಸುತ್ತಿದ್ದಾಳೆ. ಅತ್ತೆ-ಸೊಸೆ, ಸ್ನೇಹ ಸೌಹಾರ್ದತೆಯಿಂದ ಕೂಡಿ ಸಂತೆಪೇಟೆ ಮಾಡುತ್ತಾಳೆ. ಮನೆಯ ವ್ಯವಹಾರಗಳನ್ನು ಸಹಿತ ನೋಡುತ್ತಿದ್ದಾಳೆ. ಬ್ರಿಟನ್ನಿನ ನ್ಯಾಯವಾದಿ ಫ್ರಾನ್ಸಿಸ್ ಬೇಕನ್ ಸ್ತ್ರೀಯು ಯುವಕನ ಪ್ರೇಮಿ, ಪ್ರೌಢನ ಹೆಂಡತಿ, ವೃದ್ಧನ ಸೇವಕಿ ಎಂದು ಹೇಳಿದ್ದಾನೆ. ಪುರುಷರಂತೆ ಸ್ತ್ರೀಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ. ಉದ್ಯೋಗಸ್ಥ ಪುರುಷನಿಗೆ ಉದ್ಯೋಗಸ್ಥ ಮಹಿಳೆ ಕುಟುಂಬಕ್ಕೆ ಆರ್ಥಿಕ ಬೆಂಬಲ ನೀಡುತ್ತಿದ್ದಾಳೆ. ಸ್ತ್ರೀಯು ಇಂದು ಪುರುಷನಿಗೆ ಸರಿ ಸಮಾನವಾಗಿ ಕಾರ್ಖಾನೆ, ಕಚೇರಿಗಳಲ್ಲಿ ದುಡಿಯಬಲ್ಲಳು. ಸ್ತ್ರೀಯರು ಇಂದು ಆಸ್ತಿಗೆ ಒಡೆಯರಾಗಿದ್ದಾರೆ. ಕಾರ್ಯಾಲಯಗಳಲ್ಲಿ ಕಾರಕೂನಳಾಗಿ, ರಾಜಕೀಯದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿದ್ದಾಳೆ. ಸಮಾಜದಲ್ಲಿ ಮಹಿಳೆ ವೈದ್ಯೆ, ಪತ್ತೇದಾರಿಣಿ, ಸಂಶೋಧಕಿ, ಇಂಜಿನಿಯರ್, ಪೈಲಟ್, ಚಿತ್ರಕಲೆ, ಕಸೂತಿ ಮುಂತಾದ ಅನೇಕ ರಂಗಗಳಲ್ಲಿ ಪ್ರವೇಶ ಪಡೆದಿದ್ದಾಳೆ.

ರಾಜಿ, ಹಾಸನ

# Women and Modern Society

We live in a noninterventionist society. The phenomena of democracy and open education have bridged abyss of inequality between both the sexes to great extent. Modern Education has allowed women to come out of the confines of home and take active part in the society and work shoulder-toshoulder to with men in every field.

Modern women's rights are protected by the law. But is the modern woman equal to her husband, to her boss and to her father..etc. She has to work more hours both at her job and her home and often she has to stand the harassment at working place.

She is mostly seen as mother, wife, relative, friend, grandmother. When a girl is born, her room is mostly painted pink, while growing up relatives try to persuade her that her goal is to get a married and have children. Girl dreams her wedding, her wedding gown and her future husband. Ail this brainwash makes girls believe that they need nothing more than get married and have children in order to be happy.

Modern society insists on degrading the woman's role. Single mothers face suspicious. Also abortion is still taboo. Women are free to choose their lifes, they are free to choose the way they want to live with or without husband, with or without have children and with or without any kind of boss on their necks. And what if I don't want get married? what if I don't want have children? Does it mean that I won't be happy?

Nature has placed more compulsions on woman by virtue of being a mother. Financial independence is the key to self reliance. Earning woman help run the family. She has to look for employment more at from marriage viewpoint.

Parents give attention of girl's educa-tion. Daughters have been found to be dashing and academic achieving in educational field.The society should learn to respect her. At home the husband should share the burden of household. She is treated like a co-partner.

The function of modern woman varies significantly from that of her grandmother or great grandmother. Great grandmother and grandmother are guardians of Grandchildren,

*(Contd. in Page 13)*





# ಮಹಿಳೆ ಮೇಲಿನ ದೌರ್ಜನ್ಯಕ್ಕೆ ಮುಕ್ತಿ ಎಂದು

ಮಹಿಳೆಯ ಮೇಲಿನ ಅತ್ಯಾಚಾರ, ದೈಹಿಕ ಕಿರುಕುಳ ಇಲ್ಲವೇ ದೈಹಿಕ ದೌರ್ಜನ್ಯಗಳ ಸಮಾಚಾರಗಳು ನಮ್ಮ ದೇಶದ ವೃತ್ತಪತ್ರಿಕೆಗಳಲ್ಲಿ ನಿರಂತರವಾಗಿ ಪ್ರಕಟಗೊಳ್ಳುತ್ತಿರುವುದನ್ನು ನೋಡಿದರೆ, ಈ ದೇಶದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲವೇ ಇಲ್ಲವೇನೋ ಎಂಬ ಅಭಿಪ್ರಾಯ ಮೂಡುವುದು ಸಹಜವೇ. ದೇಶದ ವಿವಿಧ ಭಾಗಗಳಲ್ಲಿ, ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ, ಶೈಕ್ಷಣಿಕ ವಲಯಗಳಲ್ಲಿ, ಮನೆಯಲ್ಲಿ ಸುಮ್ಮನೆ ಕುಳಇತಿರುವ ವೃದ್ಧೆಯ ಮೇಲೋ, ಕೆಲಸಕ್ಕಾಗಿ ಇರುವ ಮಹಿಳೆಯ ಮೇಲೋ ಜರುಗುತ್ತಿರುವ ದೈಹಿಕ ಅತ್ಯಾಚಾರ ಇಲ್ಲವೇ ಲೈಂಗಿಕ ದೌರ್ಜನ್ಯಗಳು, ಮಾನವರಲ್ಲಿನ, ಅದರಲ್ಲೂ ಪುರುಷರಲ್ಲೇ ಸುಪ್ತವಾಗಿ ಇರುವ ಕಾಮತೃಷೆಯ ಮನೋಭಾವವನ್ನು ಪ್ರತಿಬಿಂಬಿಸುವ ಸನ್ನಿವೇಶಗಳಾಗಿವೆ.

ಇಂಥ ದೌರ್ಜನ್ಯ ಸನ್ನಿವೇಶಗಳು ಕಾಮತೃಷೆಯ ಈಡೇರಿಕೆಗಾಗಿ ಮಾತ್ರಲ್ಲದೆ, ಅನ್ಯಾಯಯುತ ಧನಾರ್ಜನೆಯ ಉದ್ದೇಶಗಳಿಗಾಗಿಯೂ ಇರುತ್ತವೆ. ಇತ್ತೀಚೆಗೆ ತಾನೇ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ತಮ್ಮ ಯುವ ವಕೀಲೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದರೆನ್ನಲಾದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯೊಬ್ಬರ ಹೆಸರು ಜನಮಾನಸದಲ್ಲಿ ನಿಂತಿರುವುದೂ ಬಲು ಶೋಚನೀಯ.

ಸಾಕಷ್ಟು ಸಾಕ್ಷ್ಯಾಧಾರಗಳು ಲಭಿಸಿದರಾಗಲೀ ಅಥವಾ ಲಭ್ಯವಾಗದಿರುವುದಾಗಲೀ ಆದರೂ ಇಷ್ಟು ದಿವಸ ಈ ಪ್ರಕರಣ ಇಷ್ಟು ತಡವಾಗಿ ಬೆಳಕಿಗೆ ಬಂದಿರುವುದು ತೀರಾ ವಿಷಾದನೀಯ. ನ್ಯಾಯ-ನೀತಿ-ಧರ್ಮ-ಸಂಸ್ಕೃತಿಗಳನ್ನು ಎತ್ತಿ ಹಿಡಿಯುವ ನ್ಯಾಯಾಲಯದ ನ್ಯಾಯಮೂರ್ತಿಗಳ ಮೇಲೂ ಈ ಬಗೆಯ ಪರಿಸ್ಥಿತಿ ಏರ್ಪಟ್ಟಿರುವುದು ಇಡೀ ಸಮಾಜವೇ ತಲೆ ತಗ್ಗಿಸಬೇಕಾದ ಸನ್ನಿವೇಶವನ್ನು ಉಂಟುಮಾಡಿದೆ.

ಸಮಾಜದಲ್ಲಿ ಕಾಣಬರುವ ವಿವಿಧ ಕ್ಷೇತ್ರಗಳಲ್ಲಿ ಅದರಲ್ಲೂ ಮುಖ್ಯವಾಗಿ ಹಗಲು ಮತ್ತು ಇರುಳುಗಳ ಪಾಳಿಗಳಲ್ಲಿ ಕೆಲಸ ಮಾಡುವ, ಮಹಿಳಾ ಟೆಕ್ಕಿಗಳ ವಿಚಾರಗಳು ರಕ್ಷಣೆಯ ಅತ್ಯಗತ್ಯತೆಗಳ ಗಂಭೀರತೆಯನ್ನು ತಿಳಿಯ ಹೇಳುತ್ತವೆ. ಹಗಲಿನ ಪಾಳಿ ಕೆಲಸವನ್ನು ಮುಗಿಸಿಕೊಂಡು ಸುಮಾರು ರಾತ್ರಿ 9 ಗಂಟೆಗೆ ಮನೆಗೆ ಮಹಿಳಾ ಟೆಕ್ಕಿ ಬಸ್ಸಿನಲ್ಲೋ ಖಾಸಗೀ ವಾಹನದಲ್ಲೋ ಆಟೋದಲ್ಲೋ ಮನೆಗೆ ಹಿಂತಿರುಗುವಲ್ಲಿ ನಿರ್ಜನ ಪ್ರದೇಶವೊಂದರಲ್ಲಿ ಆಕೆಯ ಮೇಲೆ ಎರಗಿ ಅಮಾನುಷ ಅತ್ಯಾಚಾರವನ್ನು ಎಸಗುವ, ಕೆಲವೊಮ್ಮೆ ಸಾಮೂಹಿಕವಾಗಿ ಅತ್ಯಾಚಾರವೆಸಗುವ ಸನ್ನಿವೇಶಗಳು; ಅಂತೆಯೇ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಹೊರಡುವ ಮಹಿಳಾ ಟೆಕ್ಕಿಯ ಮೇಲನ ದೌರ್ಜನ್ಯ ಸನ್ನಿವೇಶಗಳು ಮುಂತಾದವೆಲ್ಲ ಮಹಿಳಾ ರಕ್ಷಣೆಗೆ ಆದ್ಯತೆಯನ್ನು ನೀಡುವ ಅಗತ್ಯವನ್ನು, ಎತ್ತಿ ಹೇಳುತ್ತವೆ. ಕೆಲವೊಮ್ಮೆ ರಕ್ಷಣೆಗೆಂದೇ ಜೊತೆ ಬರುವ ಪುರು ಅಂಗರಕ್ಷಕನೇ ಮಹಿಳೆಯ ಮೇಲೆ ಅತ್ಯಾಚಾರವೆಸಗಿ, ಮೈಮೇಲಿನ ಆಭರಣ, ಪರ್ಸ್‌ನಲ್ಲಿರುವ ಹಣವನ್ನು ದೋಚಿ, ಕೊನೆಗೆ ಸಾಯಿಸಿಬಿಡುವ ಮಟ್ಟಕ್ಕೂ ಇಳಿಯುವ ಸಂದರ್ಭಗಳು ಇಲ್ಲದಿಲ್ಲ. ಇಂಥ ಅಪರಾಧಗಳ ಬಗ್ಗೆ ಅಪರಾಧಿಯನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿದಾಗ್ಯೂ ಪ್ರಕರಣವನ್ನು ಊರ್ಜಿತಗೊಳಿಸುವಂಥ ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪಿಯನ್ನು ಮುಕ್ತವನ್ನಾಗಿ ಮಾಡಿದ ಸಂದರ್ಭಗಳೂ ಇವೆ ಎನ್ನಲಾಗಿದೆ.

ನಮ್ಮ ದೇಶದ ಸರ್ಕಾರದ ಆಡಳಿತ ಮಹಿಳೆಗೆ ರಕ್ಷಣೆ ನೀಡುವ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದೇನೋ ಸರಿ. ಆದರೆ ಅವನ್ನು ಅನುಷ್ಠಾನಕ್ಕೆ ತಂದಿರುವ, ತರಬೇಕೆಂದಿರುವ, ತರುವಲ್ಲಿ ವಿಳಂಬವಾಗಿರುವ ಸನ್ನಿವೇಶಗಳು ಕೇವಲ ಕಾಗದದ ಹುಲಿ ಎನ್ನುವಂತಿದೆ. ಉದ್ಯೋಗ ಎಸಗುವ ಸ್ಥಳದಲ್ಲಿ ಮಹಿಳೆಯರ ಮೇಲಿನ ದೈಹಿಕ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಈ ದಿವಸಗಳಲ್ಲಿ ಅವನ್ನು ತೊಡೆದು ಹಾಕುವ ಇಲ್ಲವೇ ನಿಯಂತ್ರಿಸುವ 2013 ತಡೆ ಕಾಯಿದೆ ಶಾಸನರೂಪ ಪಡೆದು ಹಲವಾರು ತಿಂಗಳುಗಳೇ ಆಗಿವೆ. ಇದರ ಬಗ್ಗೆ ಕೇಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಅದಕ್ಕೆ ಇರುವ ನಿಯಮಗಳನ್ನು ಅಂತಿಮಗೊಳಿಸಲು ವಿಳಂಬ ಧೋರಣೆ ಅನುಸರಿಸುತ್ತಿವೆ ಎಂದು ಕಾಣುತ್ತದೆ. ಇನ್ನೆಷ್ಟು ದುರ್ದೈವಿ ಮಹಿಳೆಯರು ಈ ಬಗೆಯ ಲೈಂಗಿಕ ಕಿರುಕುಳ, ದೈಹಿಕ ದೌರ್ಜನ್ಯಗಳಿಗೆ ಬಲಿಪಶುವಾಗಿ ಈಡಾಗಬೇಕೋ ತಿಳಿಯದು. ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲನ್ನು ಭದ್ರ ಪಡಿಸಿದ ಹಾಗಾಗುತ್ತದೆ ಇಂಥ ಸನ್ನಿವೇಶ.

ಸಮಾಜದ ಒಳಿತಿಗಾಗಿ ಹಲವಾರು ನೀತಿ ಸಂಹಿತೆಗಳು, ನಿಯಂತ್ರಣಾ ಶಾಸನಗಳೂ, ನಿಯಮಗಳೂ, ರೂಪುಗೊಳ್ಳುವುದು ಸಹಜವೇ. ಇವು ಆದಷ್ಟು ಅನುಷ್ಠಾನಕ್ಕೆ ಬರುವುದು ತೀರಾ ಅತ್ಯಗತ್ಯ, ಅಪೇಕ್ಷಣೀಯ. ನಿಯಮಗಳು ಅಂತಿಮಗೊಳ್ಳದಿದ್ದರೆ ಕಾಯಿದೆ, ಶಾಸನ, ಅನುಷ್ಠಾನಕ್ಕೆ ಬರುವುದಾದರೂ ಹೇಗೆ? ಮಹಿಳೆಯರ ಭವಿಷ್ಯದ ಪಾಡೇನು? ದೆಹಲಿಯಲ್ಲಿ 2012ರಲ್ಲಿ ಜರುಗಿದ ಯುವತಿಯೋರ್ವಳ ಮೇಲಿನ ಸಾಮೂಹಿಕ ಅತ್ಯಾಚಾರದ ಆಧಾರದ ಮೇಲೆ 2013ರಲ್ಲಿ ನಿಯಂತ್ರಣ, ನಿಷೇಧ ಮತ್ತು ಇತ್ಯರ್ಥಗಳಿಗೆ ಸಂಬಂಧಿಸಿದ ಕಾಯಿದೆ ರೂಪುಗೊಂಡಿತು. ಸಂಸತ್ತಿನ ಉಭಯ ಸದನಗಳ ಅನುಮೋದನೆ, ರಾಷ್ಟ್ರಪತಿಗಳ ಅನುಮೋದನಾ ಸಹಿ ಎಲ್ಲವೂ ಆಗಿದೆ. ದೇಶದಲ್ಲಿ ಬೆಳಕಿಗೆ ಬಂದಿರುವ ಅನೇಕ ಅತ್ಯಾಚಾರ, ದೌರ್ಜನ್ಯ ಪ್ರಸಂಗಗಳೂ ಬೆಳಕಿಗೆ ಬಾರದಿರುವ ಇನ್ನೂ ಅನೇಕ ಪ್ರಕರಣಗಳೂ ಇವೆ. ನ್ಯಾಯಾಲಯಗಳ ಮೆಟ್ಟಿಲುಗಳನ್ನು ಏರಿರುವ ಅನೇಕ ಸನ್ನಿವೇಶಗಳಿವೆ. ಇಷ್ಟಾದರೂ ಶಾಸನ ಅನುಷ್ಠಾನಕ್ಕೆ ಇನ್ನೂ ಬಾರದಿರುವುದು ಶೋಚನೀಯ. ಇನ್ನು ಮೇಲಾದರೂ ಸರ್ಕಾರ ಪರಿಸ್ಥಿತಿಯ ತೀವ್ರತೆಯನ್ನು ಮನಗಂಡು ಮಹಿಳಾ ಮೇಲಿನ ದೌರ್ಜನ್ಯ, ಅತ್ಯಾಚಾರಗಳಿಗೆ ತಡೆಯೊಡ್ಡುವ ನಿಯಮಗಳನ್ನು ಕೂಡಲೇ ಅನುಷ್ಠಾನಕ್ಕೆ ತರಲಿ, ಮಹಿಳೆ ಮೇಲಿನ ದೌರ್ಜನ್ಯ ಅತ್ಯಾಚಾರಗಳಿಗೆ ಮುಕ್ತಿ ದೊರಕಿಸಲಿ ಎಂದು ಹೇಳುವ ಮಂದಿ ಭಾರತದಲ್ಲಿ ಬಹಳಷ್ಟು ಇದ್ದಾರೆ.

ಚಿಂತನಶೀಲರು, ವಿಚಾರವಾದಿಗಳು ಈ ಬಗ್ಗೆ ಪರಸ್ಪರ ಚರ್ಚೆಗಳನ್ನು ಏರ್ಪಡಿಸಿಕೊಂಡು ಸಾರ್ವಜನಿಕ ಅಭಿಪ್ರಾಯದ ಕೊಡಲಿಪೆಟ್ಟನ್ನು ಆಡಳಿತದ ತಲೆಯ ಮೇಲೆ ಹಾಕಲಿ ಎಂದು ಹೇಳೋಣ. ತಂದೆಯೇ ವಯಸ್ಸಿಗೆ ಬಂದ ಮಗಳ ಮೇಲೆ ದೌರ್ಜನ್ಯವೆಸಗುವುದು, ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಸುಳ್ಳುದೂರನ್ನು ನೀಡುವುದು, ಸಾರ್ವಜನಿಕ ಆಕ್ರೋಶವನ್ನು ಉದ್ದೀಪಿಸುವ ಯಾವುದೇ ನಿರಾಧಾರ ಸುದ್ದಿಯನ್ನು ನೀಡುವುದು, ನೋಡುಗರ ಕಾಮ ಪಿಪಾಸೆಯನ್ನು ಕೆರಳಿಸುವಂಥ ವಸ್ತ್ರಧಾರಣಾ ಸಂಹಿತೆಯ ರೀತಿನೀತಿಗಳನ್ನು ಮಹಿಳೆಯರು ಉಲ್ಲಂಘಿಸುವುದು, ತನ್ನ ದ್ವೇಷ ತೀರಿಸಿಕೊಳ್ಳುವಸ ಲುವಾಗಿಯೇ, ಮಹಿಳೆಯು ಲೈಂಗಿಕ ಕಿರುಕುಳದ ದೂರನ್ನು ದಾಖಲಿಸುವುದು ಮುಂತಾದವುಗಳ ಮೇಲೂ ಉಗ್ರಕ್ರಮ ಕೈಗೊಳ್ಳುವುದರ ವಿಧಿಗಳೂ ಶಾಸನದಲ್ಲಿ ಸೇರ್ಪಡೆಯಾದರೆ, ಕೊಂಚಮಟ್ಟಿಗಾದರೂ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ, ದೈಹಿಕ ದೌರ್ಜನ್ಯಕ್ಕೆ ಮುಕ್ತಿ ದೊರೆಯುವಂತಾಗುತ್ತದೆ.

ಎಸ್. ರಾಮಪ್ರಸಾದ್, ಮೈಸೂರು



# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

**ಪ್ರೊ. ಬಿ. ನಾರಾಯಣಮ್ಮ**





ಶ್ರೀ ಮರಿಮಲ್ಲಯ್ಯ

**ಕ್ರಿ.ಶ. 1402ರ ಶಾಸನ:** ತಮಿಳುನಾಡಿನ ಡೆಂಕಣಿಕೋಟೆ ತಾಲ್ಲೂಕಿನ ಗುಮ್ಮಳಾಪುರದ ಕ್ರಿ.ಶ. 1402ರ ತಾಮ್ರ ಶಾಸನದಲ್ಲಿ ವಿಜಯನಗರದ ಅರಸ ಸಾಳ್ವ ನರಸಿಂಹನ ಆಳ್ವಿಕೆಯ ಕಾಲದಲ್ಲಿ ವೀರಣ್ಣ ದೇವರು ಎಂಬುವವರು ಬೆಂಗಳೂರು ಸ್ಥಳದ ವಳಿತವಾದ ಗುಮ್ಮಳಾಪುರ ಹೋಬಳಿಗೆ ಸೇರುವ ರಾಯಸಮುದ್ರ ಗ್ರಾಮ ಮತ್ತು ತಮ್ಮಾಪುರ ಗ್ರಾಮ ಹಾಗೂ ಭೂಮಿಯನ್ನು ಆ ಸ್ಥಳಕ್ಕೆ ಪ್ರಭುಗಳಾದ ಚಿಕ್ಕರಾಯರಿಂದ (ಸುಗಟೂರು ಪಾಳೆಯಗಾರ ತಮ್ಮೇಗೌಡ) ಕ್ರಯಕ್ಕೆ ತೆಗೆದುಕೊಂಡ 'ವೀರರಾಯ ಸಮುದ್ರ ಅಗ್ರಹಾರ' ಉಪಾಧ್ಯರಿಗೆ ಬರೆಸಿಕೊಟ್ಟ ಭೂದಾನದ ವಿವರಗಳಿವೆ.

ಈ ಶಾಸನದಿಂದ ಕ್ರಿ.ಶ. 1402ರಲ್ಲಿ ಇಂದಿನ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಡೆಂಕಣಕೋಟೆ ತಾಲ್ಲೂಕಿನ ಗುಮ್ಮಳಾಪುರವು ಬೆಂಗಳೂರು ವಳಿತಕ್ಕೆ ತುಳಿತಕ್ಕೆ ಅಂದರೆ ಆಡಳಿತಕ್ಕೆ ಸೇರಿತ್ತೆಂಬುದು ತಿಳಿದು ಬರುತ್ತದೆ. ಕ್ರಿ.ಶ. 1402ರ ವೇಳೆಗೆ ದೊಡ್ಡ ಊರಾಗಿದ್ದ ಬೆಂಗಳೂರು ವಿಸ್ತಾರವಾದ ಪ್ರದೇಶಕ್ಕೆ ಆಡಳಿತದ ಕೇಂದ್ರವಾಗಿತ್ತು. ಕಾಲಕ್ರಮೇಣ ಯಲಹಂಕ ನಾಡಪ್ರಭುಗಳ ಆಳ್ವಿಕೆಯ ಕಾಲದಲ್ಲಿ ಯಲಹಂಕ ನಾಡಿನ ರಾಜಧಾನಿಯಾಯಿತು.

**ಪುರೋಹಿತ ದಾನಶಾಸನ:** ಬೆಂಗಳೂರಿಗೆ ದೇವರಾಯಪಟ್ಟಣ ಎಂಬ ಇನ್ನೊಂದು ಹೆಸರಿತ್ತೇ? ಎಂಬ ಅನುಮಾನ ಉಂಟಾಗುತ್ತದೆ. ಬೆಂಗಳೂರಿನ ಪುರೋಹಿತರ ದಾನಶಾಸನದಲ್ಲಿ 'ದೇವರಾಯಪಟ್ಟಣಕ್ಕೆ ಪ್ರತಿ ನಾಮಧೇಯವಾದ ಬೆಂಗಳೂರಿನ ವಾಸಿಗಳಾದ ವೇದಟ್ಟ ಅನಂತಭಟ್ಟರ ಪೌತ್ರರಾದ ಸಂಗಂಭಟ್ಟರ ಪುತ್ರರಾದ ಅನಂತಭಟ್ಟರಿಗೆ ಬರೆಸಿಕೊಟ್ಟ ಪುರೋಹಿತ ದಾನಧರ್ಮಶಾಸನ' ಎಂಬ ಒಕ್ಕಣೆ ಇದೆ. ಆದರೆ ಈ ದಾನಶಾಸನವು ಒಂದು ಕೂಟ ಶಾಸನ. ಇದು ಶಾಸನವಲ್ಲ. ಸನ್ನದು, ಇದು ಕೂಟ ಸನ್ನದು.

**ಕ್ರಿ.ಶ. 1761ರ ಶಾಸನ:** ಕ್ರಿ.ಶ. 1761ರ ಕೋಲಾರದ ಒಂದು ಶಾಸನದಲ್ಲಿ 'ಶ್ರೀಮತು ಬೆಂಗಳೂರು ದ್ಯಾವರಾಯಪಟ್ಟಣದ ಚಿಕ್ಕಂಣ ಶೆಟ್ರು ಅಮೃತಸಾಗರದ ಅರಳೆಪ್ಯಾಟೆ ಕಳಸಪ್ಪ ಶೆಟ್ರು ಮುಂತಾದ ಸ್ಥಳಧ' ಎಂಬ ವಿವರಗಳಿವೆ. ಇದರ ಪ್ರಕಾರ ಬೆಂಗಳೂರಿಗೆ ಸೇರಿದ ಅಥವಾ ಸನಿಹದ ದೇವರಾಯಪಟ್ಟಣ ಎಂದಾಗುತ್ತದೆ.

**ಕ್ರಿ.ಶ. 1431ರ ಕೊಡಿಗೆಹಳ್ಳಿಯ ಶಿಲಾಶಾಸನ:** ಯಲಹಂಕದ ಸಮೀಪದಲ್ಲಿರುವ ಕೊಡಿಗೆಹಳ್ಳಿಯ ಒಂದು ಶಿಲಾಶಾಸನದಲ್ಲಿ ಕ್ರಿ.ಶ. 1431ರಲ್ಲಿ ಪ್ರೌಢ ಪ್ರತಾಪರಾಯನು ಯಲಹಂಕ ನಾಡಿನ ವಿರೂಪಾಕ್ಷಪುರ ಎಂಬ ಗ್ರಾಮವನ್ನು 'ವಿಜಯದೇವರಾಯಪುರ' ಎಂಬ ಗ್ರಾಮವನ್ನಾಗಿ ಮಾಡಿ ಆ ದೇವರಾಯಪುರವೆಂಬ ಗ್ರಾಮ, ದೇವಸಮುದ್ರದ ಕೆರೆಯ ಕೆಳಗೆ, ಐದು ಖಂಡುಗ ಗದ್ದೆಯನ್ನು ದೇವರಾಯನಿಗೆ ಆಯುರಾರೋಗ್ಯ ಐಶ್ವರ್ಯವೃದ್ಧಿ ಆಗಲೆಂದು ದಾನವಾಗಿ ಕೊಟ್ಟ ವಿವರಗಳಿವೆ. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ದೇವರಾಯಪುರ ಅಥವಾ ದೇವರಾಯ ಪಟ್ಟಣ ಇಂದಿಗೂ ಕೊಡಿಗೆಹಳ್ಳಿಯ ಹತ್ತಿರದಲ್ಲಿ ಜನವಸತಿ ಇರುವ ಗ್ರಾಮವಾಗಿದೆ. ಕೋಲಾರ ಶಾಸನದಲ್ಲಿ ಶ್ರೀಯತು ಬೆಂಗಳೂರು ದ್ಯಾವರಾಯಪಟ್ಟಣದ ಎಂಬ ಉಲ್ಲೇಖವಿದೆ. ಆದರೆ ಬೆಂಗಳೂರು, ದ್ಯಾವರಾಯಪಟ್ಟಣ ಒಂದೇ ಅಲ್ಲ ಎನ್ನಬಹುದು.

**ಶಿವಗಂಗೆಯ ಶಾಸನ:** ಕ್ರಿ.ಶ. 1609ರ ಶಿವಗಂಗೆಯ ಶಾಸನದಲ್ಲಿ ಬೆಂಗಳೂರು ಕೆಂಪನಾಚಯ ಗೌಡರ ಕೊಮಾರ ಕೆಂಪಯ್ಯಗೌಡನು ಗಂಗಾದರ ಸ್ವಾಮಿಯ ಪಾದಕೆ ಸದಾ ನಮಸ್ಕಾರ ಎಂಬ ಉಲ್ಲೇಖವಿದೆ.

(ಮುಂದುವರಿಯುವುದು)

---

while parents are away. *(From Page No. 9)*

Contemperory women has numerous roles. They are

* Mother
* Money Earner
* Monitory Planner
* Instructor
* Phsycologist
* Minister

The list goes on. A woman plays a many roles.

She wants to have a nice-family. Mod-ern women live luxurious and costlier. Modern Woman's attitude is changed in comparison to ancient woman. Modern woman comes out of the home and participate in political field.

A girl becomes a woman becomes wife becomes a mother. Mother becomes a Grand mother and also woman becomes relative and friend. The above roles are most important for of all girls.

*Savithri, Mysore*



# ತಲಕಾಡಿನ ಗಂಗರು (ಕ್ರಿ.ಶ. 350-999)

**ಮೂರನೆಯ ಮಾಧವ (ಕ್ರಿ.ಶ. 460-500)**

ಇವನ ಮತ್ತೊಂದು ಹೆಸರು ತಡಂಗಾಲ ಮಾಧವ. ಇವನಿಗೆ ಕದಂಬ ಅರಸ ಕಾಕುತ್ಸ್ಥ ವರ್ಮ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟು ಮೈತ್ರಿ ಬೆಳೆಸಿಕೊಂಡಿದ್ದನು. ಗಂಗ ದೊರೆಗಳಲ್ಲಿ ಅವಿನೀತ (ಕ್ರಿ.ಶ. 500-540) ಪ್ರಬಲ ಅರಸ. ಎಲ್ಲ ರಾಜವಿದ್ಯೆಗಳಲ್ಲೂ ಪಾರಂಗತನಾಗಿದ್ದು ಸುಮಾರು 40 ವರ್ಷಗಳ ಕಾಲ ಉತ್ತಮ ಆಳ್ವಿಕೆ ನಡೆಸಿದನು. ತಾನು ಜೈನಧರ್ಮಾನುಯಾಯಿಯಾದರೂ ಮತಾಂಧನಾಗಿರಲಿಲ್ಲ. ಜೈನಮುನಿ ವಿಜಯಕೀರ್ತಿ ಅವಿನೀತನ ಶಿಕ್ಷಾಗುರುವಾಗಿದ್ದನು.

**ದುರ್ವಿನೀತ (ಕ್ರಿ.ಶ. 540-600)**

ಗಂಗ ಅರಸರಲ್ಲಿ ದುರ್ವಿನೀತ ಅಪ್ರತಿಮ ವೀರ ಮತ್ತು ಅದ್ವಿತೀಯ ವಿದ್ವಾಂಸ ಹಾಗೂ ಕಲಾಭಿಜ್ಞ. ದುರ್ವಿನೀತ ತನ್ನ ಮಗಳನ್ನು ಚಾಲುಕ್ಯರ ವಿಜಯಾದಿತ್ಯನಿಗೆ ಕೊಟ್ಟು ವಿವಾಹ ಮಾಡಿ ತನ್ನ ಶಕ್ತಿ ಸಾಮರ್ಥ್ಯ ಹೆಚ್ಚಿಸಿಕೊಂಡನು. ಅನಂತರ ಪಲ್ಲವರನ್ನು ಸೋಲಿಸಲಾಗಿ ಅಂಧೇರಿ, ಕೊಯಮತ್ತೂರು, ಸೇಲಂ, ಚೆಂಗಲ್‌ಪೇಟೆ ದುರ್ವಿನೀತನ ವಶವಾದುವು. ಈತನ ತಾಯಿ ಪುನ್ನಾಟದ ಸ್ಕಂಧವರ್ಮನ ಒಬ್ಬಳೇ ಮಗಳು. ಹೀಗಾಗಿ ಪುನ್ನಾಟವೂ ಅವನ ಕೈಸೇರಿತು. ದುರ್ವಿನೀತ ಪರಾಕ್ರಮಶಾಲಿಯಾದಷ್ಟೇ ವಿದ್ವಾಂಸನೂ, ಸಾಹಿತ್ಯ ಕಲಾಪ್ರೋತ್ಸಾಹಕನೂ ಆಗಿದ್ದ. ಸಂಸ್ಕೃತ ವ್ಯಾಕರಣ 'ಶಬ್ದಾವತಾರ'ದ ಕರ್ತೃ ಹಾಗೂ ಸುಪ್ರಸಿದ್ಧ ಜೈನ ವಿದ್ವಾಂಸರಾದ ಪೂಜ್ಯಪಾದರು (ದೇವನಂದಿ) ದುರ್ವಿನೀತನ ಶಿಕ್ಷಾಗುರುವಾಗಿದ್ದರು. ಸ್ವತಃ ವಿದ್ವಾಂಸನಾದ ದುರ್ವಿನೀತ ಭಾರವಿಯ 'ಕಿರಾತಾರ್ಜುನೀಯ'ಕ್ಕೆ ವ್ಯಾಖ್ಯಾನ ಬರೆದಿದ್ದಾನೆ. ಗುಣಾಢ್ಯನ ಪೈಶಾಚಿ ಭಾಷೆಯ ಬೃಹತ್ಕಥಾವನ್ನು (ವಡ್ಡಕಥೆ) ಸಂಸ್ಕೃತಕ್ಕೆ ಭಾಷಾಂದರಿಸಿದವನು ದುರ್ವಿನೀತನೆ. ಕಿರಾತಾರ್ಜುನೀಯದ ಕರ್ತೃ ಭಾರವಿ ಕೆಲಕಾಲ ದುರ್ವಿನೀತನ ಆಸ್ಥಾನದಲ್ಲಿದ್ದನು. ನೀತಿಶಾಸ್ತ್ರವಕ್ಷ ಪ್ರಯೋಕ್ಷ ಕುಶಲ ಎಂಬ ಬಿರುದು ಪಡೆದ ವಿದ್ವಾಂಸನೂ, ವೀರನೂ, ದಕ್ಷನೂ, ಉದಾರಭಾವನೆಯುಳ್ಳವನೂ ಆಗಿದ್ದ ದುರ್ವಿನೀತನಂತ ದೊರೆಗಳು ವಿರಳ. ದುರ್ವಿನೀತನ ನಂತರ ಮುಷ್ಕರ (ಕ್ರಿ.ಶ. 606-640) ನೂ ಅನಂತರ ಪೊಲಸಿಂಹನೂ ಒಂದನೇ ಶಿವಮಾರನೂ ಅಧಿಕಾರ ನಡೆಸಿದರು.

**ಶ್ರೀಪುರುಷ (ಕ್ರಿ.ಶ. 725-788)**

ಶ್ರೀಪುರುಷ ಒಂದನೇ ಶಿವಮಾರನ ಮೊಮ್ಮಗ. ಗಂಗವಂಶದ ಅತ್ಯುತ್ತಮ ಅರಸರಲ್ಲೊಬ್ಬನಾಗಿದ್ದಾನೆ. ಈತನ 63 ವಷಗಳ ದೀರ್ಘ ಆಳಿಕೆಯಲ್ಲಿ ಗಂಗರಾಜ್ಯ ಹಿಂದೆಂದೂ ಕಾಣದ ಉಚ್ಛ್ರಾಯ ಸ್ಥಿತಿ ಕಂಡಿತು. ಚಾಲುಕ್ಯರನ್ನು ಹತ್ತಿಕ್ಕುವ ಕಾರ್ಯದಲ್ಲಿ ರಾಷ್ಟ್ರಕೂಟರು ಗಂಗರಾಜ್ಯದ ಮೇಲೂ ಆಗಾಗ ದಾಳಿ ನಡೆಸುತ್ತಿದ್ದರು. ಇದರಿಂದ ಬೆದರಿದ ಶ್ರೀಪುರುಷ ಸ್ವರಕ್ಷಣೆಯ ದೃಷ್ಟಿಯಿಂದ ತನ್ನ ರಾಜಧಾನಿಯನ್ನು ಮಕುಂದದಿಂದ ಮಾನ್ಯಪುರಕ್ಕೆ (ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕಿನ ಮನ್ನೆ) ಬದಲಾಯಿಸಿದನು. ಕ್ರಿ.ಶ. 768ರಲ್ಲಿ ಬಾಗೆಯೂರು ಮತ್ತು ಪಿಂಚನೂರು ಬಳಿ ಸಂಭವಿಸಿದ ಯುದ್ಧದಲ್ಲಿ ರಾಷ್ಟ್ರಕೂಟರನ್ನು ಹಿಮ್ಮೆಟ್ಟಿಸಿದನು. ಪಾಂಡ್ಯರ ಮೇಲೂ ಯುದ್ಧ ಹೂಡಿ ಜಯ ಗಳಿಸಿದ್ದನು. ಗಜವಿದ್ಯೆಯಲ್ಲಿ ಘನಪಂಡಿತನೆನಿಸಿಕೊಂಡಿದ್ದ ಈತ ಗಜಶಾಸ್ತ್ರ ಎಂಬ ಗ್ರಂಥವನ್ನು ರಚಿಸಿದ್ದಾನೆ. ಎಲ್ಲ ಮತಗಳನ್ನು ಆದರಿಸಿದ್ದನು. ಇವನಿಗೆ ಕೊಂಗಣಿ, ಕೊಂಗಣಿ ಮತ್ತರಸ, ಪೆರ್ಮಾನಡಿ, ಶ್ರೀವಲ್ಲಭ ಮುಂತಾದ ಬಿರುದುಗಳಿದ್ದವು.

*(ಮುಂದುವರೆಯುವುದು)*

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**ವಸಂತ, ಮೈಸೂರು**

ಕಂಡಕ್ಟರ್, ಪೊಲೀಸ್ ಮತ್ತು ಕುಕ್ಕರ್ ಸೀಟಿಗಳಿಗೆ ಏನು ವ್ಯತ್ಯಾಸ?

ಮೊದಲೆರಡರಿಂದ ಓಟಕ್ಕೆ ತಡೆ, ಕಡೆಯದರಿಂದ ಊಟಕ್ಕೆ ನಡೆ.

**ರಾಮಸ್ವಾಮಿ, ಬೆಂಗಳೂರು**

ಒಡಹುಟ್ಟಿದವರ ಪ್ರೀತಿ ಎಲ್ಲಿಯ ವರೆಗೆ?

ಒಡಕು ಹುಟ್ಟುವರೆಗೆ.

**ಸುಶೀಲ, ಮಂಡ್ಯ**

ನಾವು ಉಸಿರಾಡುವ ಗಾಳಿಗೂ ಟ್ಯಾಕ್ಸ್ ಇದ್ದಿದ್ದರೆ ಏನಾಗುತ್ತಿತ್ತು ಗುರೂ?

ಕಪ್ಪುಹಣ ಇರುವಂತೆ ಕಪ್ಪುಗಾಳಿಯನ್ನು ಕಂಡು ಹಿಡಿಯಲಾಗುತ್ತಿತ್ತು.

**ರಾಗಿಣಿ, ಚಿಕ್ಕಮಗಳೂರು**

ಸಾಲುಮರದ ತಿಮ್ಮಕ್ಕನಿಗೂ ಒನಕೆ ಓಬವ್ವನಿಗೂ ಏನು ವ್ಯತ್ಯಾಸ?

ಓಬವ್ವನಿಂದ ಮದಕರಿಗೆ ಆಸರೆ. ತಿಮ್ಮಕ್ಕನಿಂದ ಮುದುಕರಿಗೆ ಆಸರೆ.

**ರಾಮಮೂರ್ತಿ, ಹಾಸನ**

ಅತಿಯಾದ ಕೋಪ ಬಂದಾಗ ತಾಳ್ಮೆಯಿಂದಿರಲು ಏನು ಮಾಡಬೇಕು?

ನಿಮಗಿಂತ ಬಲಿಷ್ಠ ಹಾಗೂ ಕೋಪಿಷ್ಠರ ಮುಂದೆ ನಿಂತರಾಯ್ತು.

**ದಾಮೋದರ, ಹುಬ್ಬಳ್ಳಿ**

ಹೆಣ್ಣು ಸಂಸಾರದ ಕಣ್ಣು, ಗಂಡು?

ಬೇಕಾದಾಗ ಬಳಸಿ, ಬೇಡವಾದಾಗ ಪಕ್ಕಕ್ಕಿರಿಸುವ ಗಾಗಲ್ಸ್.

**ಆನಂದ, ತುಮಕೂರು**

ಪ್ರೇಮಿ, ಕವಿ, ಹುಚ್ಚ – ಈ ಮೂವರ ವ್ಯತ್ಯಾಸವೇನು?

ಪಾರ್ಕ್ ಪ್ರೇಮಿಯನ್ನೂ, ವೇದಿಕೆ ಕವಿಯನ್ನೂ ಹಾಗೆಯೇ ಬಿಗ್‌ಬಾಸ್ ಹುಚ್ಚರನ್ನೂ ಕರೆಯುತ್ತದೆ.

**ಸುರೇಶ್, ಕೋಲಾರ**

ದುಡಿದು ತಿನ್ನುವವನಿಗೂ, ದುಡಿಯದೆ ತಿನ್ನುವವನಿಗೂ ಏನು ವ್ಯತ್ಯಾಸ?

ಒಬ್ಬ ಶ್ರಮಜೀವಿ, ಮತ್ತೊಬ್ಬ ಆಶ್ರಮ ಜೀವಿ.

**ಶಿವಪ್ಪನಾಯಕ, ಕಾರವಾರ**

ಬರ್ತಾ ಬರ್ತಾ ಹುಡುಗಿಯರ ಬಟ್ಟೆಗಳು ಚಿಕ್ಕದಾಗುತ್ತಿರುವುದಕ್ಕೆ ಕಾರಣವೇನು?

ಎಲ್ಲರೂ ಮಾಡುವುದು ಗೇಣು ಬಟ್ಟೆಗಾಗಿ ಎಂಬ ದಾಸನುಡಿಗೆ ಬದ್ಧರಾಗಲು!

**ಪ್ರಸಾದ್, ಬೆಂಗಳೂರು**

ಕಟ್ಟಿಕೊಂಡವಳಿಗೂ, ಇಟ್ಟುಕೊಂಡವಳಿಗೂ ಏನು ವ್ಯತ್ಯಾಸ?

ಕಟ್ಟಿಕೊಂಡವಳು ಸಿಸ್ಟಂ ಜೊತೆ ಜೊತೆಗಿರುವ ಇಂಟೆಲ್ ಪ್ರೋಸೆಸರ್, ಇಟ್ಟುಕೊಂಡವಳು ಪೆನ್ ಡ್ರೈವ್.

**ಉಮೇಶ, ಶಿವಮೊಗ್ಗ**

ಸ್ವರ್ಗದಲ್ಲಿ ನಡೆಯುವ ಮದುವೆ ವಿಚ್ಛೇದನಗೊಳ್ಳುವುದಿಲ್ಲ, ಏಕೆ?

ಒಂದೇ ಕಾರಣ–ಸ್ವರ್ಗದಲ್ಲಿ ವಕೀಲರು ಇರುವುದಿಲ್ಲ.

**ರಾಜೇಶ್, ಬಳ್ಳಾರಿ**

ಹುಡುಗಿಯರು ಕೊಡುವ ಮುತ್ತಿನಲ್ಲಿ ಸಿಹಿ–ಕಹಿಗಳೆಂಬ ಭೇದ ಉಂಟೇ?

ಉಂಟು. ನನಗೆ ಕೊಟ್ಟರೆ ಸಿಹಿ, ಪರರಿಗೆ ಕೊಟ್ಟರೆ ಕಹಿ.



# ಚೋಟಾಳಿಗೊಬ್ಬ ಮೋಟಾಳು!

ಅನೇಕ ವರ್ಷಗಳ ಹಿಂದೆ ಶಿವಪುರವೆಂಬ ಊರಿನಲ್ಲಿ ಚೋಟು ಎಂಬ ಬಡವನಿದ್ದ. ಅವನು ಅಲ್ಲಿ ಇಲ್ಲಿ ಕೂಲಿ ಕೆಲಸ ಮಾಡಿ ಜೀವನ ಮಾಡುತ್ತಿದ್ದ. ಅವನ ದುಡಿಮೆ ಹೊಟ್ಟೆಗೆ ಬಟ್ಟೆಗೆ ಸಾಲುತ್ತಿರಲಿಲ್ಲ. ಹಾಗಾಗಿ ಅವನು ಒಂದು ಒಳ್ಳೆಯ ಕೆಲಸವನ್ನು ಹುಡುಕಿಕೊಂಡು ನಗರಕ್ಕೆ ಬಂದ.

ಅವನಿಗೆ ನಗರದಲ್ಲಿ ರಾಜನ ಅರಮನೆಯಲ್ಲಿ ಊಳಿಗದ ಕೆಲಸ ಸಿಕ್ಕಿತು. ವಾಸಕ್ಕೊಂದು ನೆಲೆಯೂ ಆಯಿತು. ಅವನು ಅಲ್ಲಿ ತೋರಿದ ವಿನಯ, ವಿಧೇಯತೆಗಳು ರಾಜನ ಮನಸ್ಸು ಮೆಚ್ಚಿತ್ತು. ರಾಜನು ಅವನ ಸಂಬಳವನ್ನು ಹೆಚ್ಚು ಮಾಡಿ ಕೋಟೆ ಕಾಯುವ ಪಹರೆ ಕೆಲಸಕ್ಕೆ ನೇಮಿಸಿದ. ಚೋಟುವಿನ ಜೀವನ ಸುಖವಾಗಿ ಸಾಗತೊಡಗಿತು. ಸ್ವಲ್ಪ ದಿನಗಳ ನಂತರ ರಾತ್ರಿ ಪಹರೆಯ ಕೆಲಸವನ್ನೂ ಚೋಟುವಿಗೆ ವಹಿಸಿ ಅವನ ಸಂಬಳವನ್ನು ದುಪ್ಪಟ್ಟು ಮಾಡಿದ.

ಚೋಟುವಿಗೆ ರಾತ್ರಿ ಬೇಗನೆ ನಿದ್ದೆ ಮಾಡಿ ಅಭ್ಯಾಸವಾಗಿತ್ತು. ಹಾಗಾಗಿ ಅವನಿಗೆ ರಾತ್ರಿ ಪಹರೆಯ ಕೆಲಸ ಕಷ್ಟವಾಯಿತು. ರಾತ್ರಿ ಪಹರೆ ಮಾಡುವಾಗ ನಿದ್ದೆ ಮಾಡಿ ರಾಜನ ಕೈಗೆ ಸಿಕ್ಕಿಬಿದ್ದ. ರಾಜನು ಅವನಿಗೆ ಮತ್ತೊಮ್ಮೆ ಹೀಗೆ ಮಾಡಿದರೆ ಕೆಲಸದಿಂದತೆಗೆದುಬಿಡುವುದಾಗಿ ಎಚ್ಚರಿಸಿದ. ಚೋಟುವು ಅದೇ ಯೋಚನೆಯಲ್ಲಿರುವಾಗ ದಾರಿಯಲ್ಲಿ ಅವನ ಊರಿನ ಗೆಳೆಯನೊಬ್ಬ ಎದುರಾದ. ಅವನ ಹೆಸರು ಮೋಟು. ಅವನೂ ಚೋಟುವಿನಂತೆ ನಗರಕ್ಕೆ ಬಂದು ಕೆಲಸ ಹುಡುಕುತ್ತಿದ್ದ.

ಮೋಟುವಿನ ವಿಷಯ ತಿಳಿದು ಚೋಟುವಿಗೆ ತಟಕ್ಕನೆ ತನ್ನ ಕೆಲಸ ಉಳಿಸಿಕೊಳ್ಳುವ ಉಪಾಯವೊಂದು ಮಿಂಚಿತು. ಅವನು ಮೋಟುವಿಗೆ 'ನಾನೇ ನಿನಗೆ ಕೆಲಸ ಕೊಡುತ್ತೇನೆ. ತಕ್ಕ ಸಂಬಳವನ್ನೂ ಕೊಡುತ್ತೇನೆ. ನೀನು ನನ್ನ ಜೊತೆಗೆ ನನ್ನ ಮನೆಯಲ್ಲೇ ಇರಬಹುದು. ಒಪ್ಪಿಕೊಳ್ಳುವಿಯಾ?' ಎಂದು ಕೇಳಿದ. ಅದಕ್ಕೆ ಮೋಟು ಒಪ್ಪಿಕೊಂಡ. ಚೋಟುವು ತನ್ನ ಗೆಳೆಯ ಮೋಟುವನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಅವನು ರಾತ್ರಿ ಕಾವಲು ಕಾಯುವ ಕೆಲಸದ ಪಾಳಿಯನ್ನು ಮೋಟುವಿಗೆ ವಹಿಸಿದ. ಮೋಟು ಹಗಲಿಡೀ ಮಲಗಿ ನಿದ್ದೆ ಮಾಡಿ ರಾತ್ರಿಯ ಪಾಳಿಗೆ ಸಿದ್ಧನಾಗುತ್ತಿದ್ದ. ಚೋಟುವು ರಾತ್ರಿ ಮನೆಗೆ ಬಂದು ತನ್ನ ಬಟ್ಟೆಗಳನು ಮೋಟುವಿಗೆ ಕೊಡುತ್ತಿದ್ದ. ಅವನು ಆ ವಸ್ತ್ರಗಳನ್ನು ಧರಿಸಿ ಕೋಟೆಯ ಕಾವಲಿಗೆ ಹೋಗುತ್ತಿದ್ದ. ಚೋಟುವು ಆನಂದವಾಗಿ ರಾತ್ರಿ ಗಡದ್ದಾಗಿ ನಿದ್ದೆ ಮಾಡುತ್ತಿದ್ದ. ಹೀಗೆಯೇ ಬಹಳ ಕಾಲ ನಡೆಯಿತು. ಇಬ್ಬರ ಜೀವನವೂ ಸುಖವಾಗಿ ಸಾಗುತ್ತಿತ್ತು. ಇದು ಅರಮನೆಯಲ್ಲಿ ಯಾರಿಗೂ ಹಲವು ವರ್ಷಗಳ ಕಾಲ ತಿಳಿಯಲೇ ಇಲ್ಲ. ಮೋಟುವಿಗೆ ಸಂಬಳವನ್ನು ಚೋಟುವೇ ಪ್ರತಿ ತಿಂಗಳು ತಪ್ಪದೇ ಕೊಡುತ್ತಿದ್ದ.

ಒಮ್ಮೆ ರಾಜನು ಮಾರುವೇಷದಲ್ಲಿ ನಗರವನ್ನು ಸುತ್ತಾಡಿ ರಾತ್ರಿ ಬಹಳ ಹೊತ್ತಿನ ಮೇಲೆ ಮರಳಿ ಬಂದ. ಆಗ ರಾತ್ರಿ ಪಾಳಿಯಲ್ಲಿದ್ದ ಮೋಟುವು ಗೊತ್ತಾಗದೆ ರಾಜನನ್ನು ಒಳಗೆ

ಬಿಡದೆ ತಡೆದ. ರಾಜನು ತನ್ನ ನಿಜವೇಷವನ್ನು ತೋರಿಸಿ ಗದರಿಸಿದಾಗ ಅವನು ಹೆದರಿಬಿಟ್ಟ. ರಾಜನಿಗೆ ಅವನು ತಾನು ನೇಮಿಸಿದ ಕೆಲಸದವನು ಅಲ್ಲವೆಂದು ತಿಳಿದು ಬಂತು. ಚೋಟುವಿನ ಬಗ್ಗೆ ವಿಚಾರಿಸಿದಾಗ ಮೋಟುವು ಅವನು ಮಲಗಿರುವುದಾಗಿ ಹೇಳಿದ. ರಾಜನು ತನ್ನ ಸೇನಾಧಿಪತಿಗೆ ಅವರಿಬ್ಬರನ್ನೂ ಮಾರನೇ ದಿನ ವಿಚಾರಣೆಗೆ ಕರೆತರುವಂತೆ ಹೇಳಿ ಅಲ್ಲಿಂದ ಹೊರಟುಹೋದ.

ಮರುದಿನ ಚೋಟು ಮತ್ತು ಮೋಟುವಿನ ವಿಚಾರಣೆ ನಡೆಯಿತು. ಚೋಟುವು ತನ್ನ ತಪ್ಪನ್ನು ಒಪ್ಪಿಕೊಂಡ. ತನ್ನ ಕೆಲಸ ಉಳಿಸಿಕೊಳ್ಳಲು ತಾನೇ ಮೋಟುವನ್ನು ಕೆಲಸಕ್ಕೆ ನೇಮಿಸಿರುವುದಾಗಿ ಹೇಳಿದ. ಆಗ ಆಸ್ಥಾನದಲ್ಲಿದ್ದ ವಿದೂಷಕನು 'ಈ ಚೋಟುವೇ ಒಬ್ಬ ಆಳು. ಅವನು ಮೋಟವನ್ನು ತನ್ನ ಆಳಾಗಿ ನೇಮಿಸಿದ್ದು ಒಳ್ಳೆ ತಮಾಷೆಯಾಗಿದೆ. ಚೋಟಾಳಿಗೊಬ್ಬ ಮೋಟಾಳು' ಎಂದು ಹಾಸ್ಯ ಮಾಡಿ ಕೈ ಚಪ್ಪಾಳೆ ತಟ್ಟಿ ನಕ್ಕ. ಅಲ್ಲಿದ್ದವರಿಗೆಲ್ಲರಿಗೂ ನಗು ಬಂತು.

ಚೋಟು ಮತ್ತು ಮೋಟು ಇಬ್ಬರೂ ತಮ್ಮನ್ನು ಕ್ಷಮಿಸಿ ಕಾಪಾಡುವಂತೆ ಪರಿ ಪರಿಯಾಗಿ ಬೇಡಿಕೊಂಡರು. ರಾಜನಿಗೂ ಮನಸ್ಸು ಕರಗಿ ಮಂತ್ರಿಗಳೊಡನೆ ಸಮಾಲೋಚಿಸಿದನು. ಅವರ ಸಲಹೆಯಂತೆ ಇಬ್ಬರನ್ನೂ ಕ್ಷಮಿಸಿದನು. ಚೋಟುವಿಗೆ ಹಗಲಿನ ಪಹರೆಯನ್ನು ನೀಡಿ ರಾತ್ರಿಯ ಪಾಳಿಯನು ಮೋಟುವಿಗೆ ನಿಗದಿಗೊಳಿಸಿ ಸಂಬಳವನ್ನೂ ಮುಂದುವರೆಸಿದರು. ವಿದೂಷಕನು ನುಡಿದ 'ಚೋಟಾಳಿಗೊಬ್ಬ ಮೋಟಾಳು' ಎಂಬ ಮಾತು ಎಲ್ಲೆಡೆ ಹಬ್ಬಿ ಅನೇಕರು ಇವರಿಬ್ಬರನ್ನೂ ಅದರಿಂದ ಹಾಸ್ಯ ಮಾಡುತ್ತಿದ್ದರು. ಚೋಟು ಮತ್ತು ಮೋಟು ಅಂತಹ ಮಾತಿಗೆ ನಕ್ಕು ಸುಮ್ಮನಾಗುತ್ತಿದ್ದರು. ಅವರು ಬಹಳ ವರ್ಷಗಳ ಕಾಲ ರಾಜನ ಆಸ್ಥಾನದಲ್ಲಿ ಸೇವೆ ಸಲ್ಲಿಸುತ್ತ ಸುಖವಾಗಿದ್ದರು.

ಈ ಕತೆಯು ಎಲ್ಲೆಡೆ ಹಬ್ಬಿ ಕೊನೆಗೆ ಇದು 'ಚೋಟಾಳಿಗೊಬ್ಬ ಮೋಟಾಳು' ಎಂಬ ಗಾದೆಯ ರೂಪವನ್ನು ಪಡೆಯಿತು. ಇಂದಿಗೂ ಇದು ಕನ್ನಡದ ಜನಪ್ರಿಯ ಗಾದೆಗಳಲ್ಲಿ ಒಂದಾಗಿ ಬಳಕೆಯಲ್ಲಿದೆ. ತಮ್ಮ ಕೆಲಸವನ್ನು ಇನ್ನೊಬ್ಬರಿಂದ ಮಾಡಿಸುವವರಿಗೆ ಈ ಗಾದೆ ಮಾತಿನಿಂದ ಹಾಸ್ಯ ಮಾಡುವುದು ರೂಢಿಯಲ್ಲಿದೆ!

–ಗೀತಾ ಶಾಸ್ತ್ರಿ, ಶಿವಮೊಗ್ಗ

## ನಾರಿ ನಿನಗೊಂದು ಸ್ಯಾರಿ

ಮಾರ್ಚ್ 8ರಂದು ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರಿಗಾಗಿ ಕಾರ್ಯಕ್ರಮವನ್ನು ದಿ. 26-3-2017ರಂದು ಶ್ರೀ ನಟರಾಜ ಕಲ್ಯಾಣ ಮಂಟಪ, ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ಮಹಿಳೆಯರು ತಮ್ಮ ಹೆಸರನ್ನು ಕೆಳಗೆ ತಿಳಿಸಿರುವ ಮೊಬೈಲ್ ನಂಬರಿನಲ್ಲಿ ದಿ. 20-3-2017ರ ಒಳಗಾಗಿ ನೊಂದಾಯಿಸಿಕೊಳ್ಳಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಶ್ರೀ ಸುಬ್ಬರಾವ್, 92435-84444 ಶ್ರೀ ಶರತ್ ಕುಮಾರ್, 94810-68476





# WHY STUDENTS FAIL?

Here is a proof why a student fails in exams. It is not the fault of the student if he fails. Because the year has only 365 days. Typical academic year for a student:

52 Sundays in a year which are rest days.

Balance 313 days.

Summer holidays - 50 where the weather is very hot and difficult to study.

Balance 263 days.

8 hours daily sleep means - 122 days.

Balance 141 days.

1 hour daily for playing for good health means 15 days.

Balance 126 days.

2 hours daily for food and other delicacies chew properly and eat means 30 days.

Balance 96 days.

1 hour for talking - man is a social animal means 15 days.

Balance 81 days.

Exam day per year at least 35 days.

Balance 46 days.

Quarterly Half yearly and festival holidays 40 days.

Balance 6 days.

For sickness at least 3 days

Balance 3 days.

Entertainment and enjoyment at least 2 days.

Balance 1 day.

That '1' day is your birthday.

How can a student pass?

He needs still more days to read for exams.

-S. Nagajyothi, Mandya

ಮಾರ್ಚ್ 2017ರಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

1. ಅನುಲೇಖಾ, ಬೆಳಗಾಂ
2. ಕರುಣಾ ಸಾಗರಿ, ಮಂತ್ರಾಲಯ
3. ತ್ರಿಶಲಾ, ಮೂಡಬಿದ್ರೆ
4. ನಂದನಾ, ಧಾರವಾಡ
5. ಜಗನ್ಮೋಹಿನಿ, ಬೆಂಗಳೂರು
6. ಚೂಡಾರತ್ನ, ಕೋಲಾರ
7. ಉಜ್ವಲಾ, ಮಂಗಳೂರು
8. ರೂಪಾ ಸುಬ್ರಹ್ಮಣ್ಯ, ಹಾಸನ
9. ನೀರಜ, ಹುಬ್ಬಳ್ಳಿ
10. ಪದ್ಮಮುಖಿ, ಪುತ್ತೂರು
11. ಬಿಂಬಿಕಾ, ಉಡುಪಿ
12. ನಾಗಮಣಿ, ಮಂಡ್ಯ
13 ಭಾಗ್ಯಜ್ಯೋತಿ, ಶಿವಮೊಗ್ಗ
14. ಪ್ರೇಮಾವತಿ, ಮೈಸೂರು
15. ನೀಲಗಂಗಾ, ಕಡೂರು
16. ಜ್ಞಾನೇಶ್ವರಿ, ಬಳ್ಳಾರಿ
17. ಚೈತನ್ಯ, ಮದ್ದೂರು
18. ಕಲರವಾ, ಕಾರವಾರ
19. ಉದಯರಾಗಿಣಿ, ಉಡುಪಿ
20. ಅನಿತ, ಮೈಸೂರು
21. ಗಾಯತ್ರಿ, ಬೆಂಗಳೂರು
22. ಐರಾವತಿ, ಮಂಡ್ಯ
23. ಅಭಿಲಾಷಿಣಿ, ಮಂಗಳೂರು
24. ಇಂದುವದನಾ, ರಾಣೆಬೆನ್ನೂರು
25. ಚಂದ್ರಮುಖಿ, ತಿಪಟೂರು
26. ಜಯಾಂಬಿಕ, ಹುಬ್ಬಳ್ಳಿ
27. ಮಾಲಿನಿ, ಹಾಸನ
28. ಗೋಮತಿ, ರಾಯಚೂರು
29. ಇಂದಿರಾ, ತುಮಕೂರು
30. ಅಭಯಂಕರಿ, ಕೊಲ್ಲೂರು
31. ಕೀರ್ತಿಮತಿ, ಬೆಂಗಳೂರು

## ದುರುಪಯೋಗ

Aಧಿಕಾರ
Bದಲಾಯಿಸುವ ಹಕ್ಕು ಪ್ರಜಾಪ್ರಭುತ್ವದಲ್ಲಿರಲು
Cಕ್ಕಿ ನರಳುವ ಕಡುಬಡವರು
Dಡ್‌ಬಡಿಸಿ ಹಸಿವಿಗೆ ದಾಸರಾಗಿ ಹಣಕ್ಕೆ
Eಥರ ಹಾಕುವರು ಓಟು.
Fತ್ಸಾಹಿಸುವ ಹುಸಿಮಾತಿಗೆ ಮರುಳಾಗಿ
Gನತೆ, ಗೌರವಗಳ ಅಳಿಸಿಕೊಂಡ ರಾಜಕಾರಣಿ
Hಬ್ಬವೋ ಹಬ್ಬ ಮತ್ತೆ ಗೆದ್ದಿರಲು
Iನ್ನೂ ನನಗಾರು ಸಮಾನರೆಂದು
Jಸ್ಟೀಸದ ನ್ಯಾಯ, ನೀತಿ, ಧರ್ಮ ತಿರುಗಿಸಿ
Kರುನಾಡ ಮಣ್ಣಿನಲ್ಲಿ
Lಯಬದ್ಧತೆಯಿಲ್ಲದಿರುವ ಜೀವನ ನಡೆಸುವರು
Mನ ಮರ್ಯಾದೆ ಹರಾಜಾಗುತ್ತಿದ್ದರೂ
Nನು ನಾನಲ್ಲ ನನಗಿದು ಗೊತ್ತಿಲವೆನ್ನುವಂತೆ
Oತು ಸುಣ್ಣವಾಗಿರುವವರೂ ಕೂಡ
Pತಿಯ ಎಳೆ ಮನಸ್ಸುಗಳ ರಾಜಕೀಯ ಆಟದಲಿ
Qಟರ್ ಫೈನಲ್‌ನಂತೆ ಮುಗಿಸುವರು
Rಜ ರಾಣಿಯನು ಕಲಿಯುಗದಲ್ಲಿ
Sದ್ಬಳಕೆ ಮಾಡಿಕೊಂಡು ರಾಜ್ಯವಾಳುವರು
Tಮಟೆ, ಡೋಲು ಬಡಿದು ಕುಣಿಸುತ
Uವ ಪೀಳಿಗೆಯ ಬದುಕ ಸುಟ್ಟ
Vದೇ ಮಾತರಂ ಗೀತೆ ಹಾಡುವಲ್ಲಿ ಜಾತಿ ಗುರ್ತಿಸಿ
Wದ್ದದ ಕ್ಷಿಪಣಿಗಳೆಸೆದು ಮುಗಿಸುವರು
Xರಾಕ್ಸ್ ಪ್ರತಿಯಂತೆ ಸ್ವಬದುಕನು
Yರಿಗೆ ಯಾರು ಅನುಭವಿಸಿದಂತೆ ಅಧಿಕಾರಾವಧಿಯ
Zಮ್ ಝೂಮ್ ಎಂದು ತಳ್ಳುವರು.

*–ಶಿವಸ್ವಾಮಿ, ಚಾಮರಾಜನಗರ*



## ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

**ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ**

# ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ

### 10. ಖೊಟ್ಟಿ ವೈದ್ಯರಿಂದ ಲೇಹ್ಯ, ಭಸ್ಮ ಉಪಯೋಗಿಸುವುದು ಹಾಗೂ ಲೈಂಗಿಕ ಸಮಸ್ಯೆಗೆ ಪರಿಹಾರ ಹುಡುಕುವುದು

ಇದು ಸಹ ದಿನನಿತ್ಯ ನಾವು ಕಾಣುವ ಜಾಹೀರಾತುಗಳು. ಪುಣ್ಯವೆಂದರೆ ಇದು ಪತ್ರಿಕೆಗಳಲ್ಲಿ ಮಾತ್ರ ಕಂಡುಬರುತ್ತಿದೆ. ದೂರದರ್ಶನದಲ್ಲಿ ಕಂಡುಬರುತ್ತಿಲ್ಲ. ಇಂತಹ ಆಯುರ್ವೇದ ಭಸ್ಮದಿಂದ, ಇಂತಹ ಮೂಲಿಕೆಗಳಿಂದ ಖಾಯಿಲೆ ಸಂಪೂರ್ಣವಾಗಿ ಗುಣವಾಗುತ್ತದೆ ಇತ್ಯಾದಿ. ಎಲ್ಲಕ್ಕಿಂತ ಮುಖ್ಯವಾಗಿ ಲೈಂಗಿಕ ಸಮಸ್ಯೆಗೆ ಪರಿಹಾರ. ಇದು ಬಹಳ ಮುಖ್ಯವಾದ ವಿಷಯ. ಹೆಚ್ಚಿನ ನಮ್ಮ ರೋಗಿಗಳು ಲೈಂಗಿಕ ವಿಷಯಗಳು ಬಂದಾಗ ಸರಿಯಾಗಿ ವೈದ್ಯರ ಹತ್ತಿರ ತಮ್ಮ ಸಮಸ್ಯೆಗಳನ್ನು ಹೇಳುವುದಿಲ್ಲ. ಮಧುಮೇಹ ಸರಿಯಾಗಿ ನಿಯಂತ್ರಿಸದಿದ್ದರೆ ಎಲ್ಲಾ ಸಮಸ್ಯೆಗಳಂತೆ ಲೈಂಗಿಕ ಸಮಸ್ಯೆಯು ಕಂಡುಬರುತ್ತದೆ.

ವಯಸ್ಸು ಹೆಚ್ಚಾದಂತೆ ಹಾಗೂ ದೀರ್ಘಾವಧಿ ಮಧುಮೇಹ ಈ ಸಮಸ್ಯೆಯನ್ನು ಹೆಚ್ಚು ಉಲ್ಬಣಗೊಳಿಸುತ್ತದೆ. ಮಧುಮೇಹ ಉತ್ತಮವಾಗಿ ನಿಯಂತ್ರಿಸದೆ ಯಾವುದೇ ರೀತಿಯ ಔಷಧಿ ತೆಗೆದುಕೊಂಡರೆ ಲೈಂಗಿಕ ಸಾಮರ್ಥ್ಯ ಹೆಚ್ಚಲು ಸಾಧ್ಯವಿಲ್ಲ ಎಂಬುದನ್ನು ಪ್ರತಿಯೊಬ್ಬ ರೋಗಿಯು ಅರಿತುಕೊಳ್ಳಬೇಕು.

ರಕ್ತದೊತ್ತಡ ನಿಯಂತ್ರಿಸುವ ಕೆಲವೊಂದು ಔಷಧಿಗಳು ಲೈಂಗಿಕ ಶಕ್ತಿ ಕುಗ್ಗಿಸುತ್ತವೆ. ರಕ್ತದೊತ್ತಡ ಇರುವವರು ಇದರ ಬಗ್ಗೆ ವೈದ್ಯರಿಗೆ ಮಾಹಿತಿ ಕೊಡಬೇಕು. ನಾನು ಕಂಡಂತೆ ಅನೇಕ ರೋಗಿಗಳು ಖೊಟ್ಟಿ ವೈದ್ಯರಿಂದ (ವಯಾಗ್ರ) ಮಾತ್ರೆಗಲನ್ನು ಪುಡಿಗಳ ರೂಪದಲ್ಲಿ ಅಥವಾ ಭಸ್ಮಗಳ ರೂಪದಲ್ಲಿ ತಿಂದು ಏನೋ ಶಕ್ತಿ ಬಂದಂತೆ ಭ್ರಮಿಸಿ ಸಾವಿರಾರು ರೂಪಾಯಿಗಳನ್ನು ಕಳೆದುಕೊಂಡಿರುವುದನ್ನು ಅನೇಕ ಸಲ ಕಂಡಿದ್ದೇವೆ. ಇಂತಹ ಖೊಟ್ಟಿ ವೈದ್ಯರು ಲೈಂಗಿಕ ಸಾಮರ್ಥ್ಯ ಹೆಚ್ಚಿಸುವ ಕೆಲವೊಂದು ಮಾತ್ರೆಗಳನ್ನು ಪುಡಿ ಮಾಡಿ ಜೇನುತುಪ್ಪದಲ್ಲಿ ಸೇವಿಸಿ, ಬೆಣ್ಣೆಯಲ್ಲಿ ಸೇವಿಸಿ ಇತ್ಯಾದಿ ರೂಪದಲ್ಲಿ ಕೊಟ್ಟು ರೋಗಿಗಳನ್ನು ಹೆಚ್ಚು ತೊಂದರೆಗಳಿಗೆ ಸಿಲುಕಿಸುತ್ತಾರೆ. ಆದುದರಿಂದ ಯಾವುದೇ ರೋಗಿಯು ಇಂತಹ ಖೊಟ್ಟಿ ವೈದ್ಯರನ್ನು ಸಂಪರ್ಕಿಸಿ ಔಷಧಿ ತೆಗೆದುಕೊಳ್ಳಬಾರದು.

ಮಧುಮೇಹ, ರಕ್ತದೊತ್ತಡ ಹಾಗೂ ರಕ್ತದಲ್ಲಿ ಕೊಬ್ಬಿನಂಶ ನಿಯಂತ್ರಣ ಇದು ಪ್ರತಿಯೊಬ್ಬ ಮಧುಮೇಹಿಯು ನಿಯಂತ್ರಿಸಬೇಕಾದ ಪ್ರಮುಖವಾದ ಅಂಶಗಳು. ನಿಮ್ಮ ತೊಂದರೆಗಳನ್ನು ವೈದ್ಯರ ಹತ್ತಿರ ಮುಚ್ಚುಮರೆಯಿಲ್ಲದೆ ಹೇಳಿ ಹಾಗೂ ಅವರ ಜೊತೆ ಮುಕ್ತವಾಗಿ ನಿಮ್ಮ ಸಮಸ್ಯೆಯನ್ನು ಚರ್ಚಿಸಿ. ವೈದ್ಯರ ಹತ್ತಿರ ನಿಮ್ಮ ಸಮಸ್ಯೆಯನ್ನು ಹೇಳದೆ ಇನ್ಯಾರಿಗೆ ಹೇಳುತ್ತೀರಿ?

*(ಮುಂದುವರಿಯುವುದು)*

# ಚಂದಾ ವಿವರ

ಈ ಕೆಳಗೆ ತಿಳಿಸಿರುವ ಮೊಬಲಗಿನಲ್ಲಿ ಅಂಚೆವೆಚ್ಚ ಹಾಗೂ ವೆಬ್‌ಸೈಟ್ ವೆಚ್ಚವು ಸೇರಿರುತ್ತದೆ. ದಯಮಾಡಿ ಪತ್ರಿಕೆಗೆ ಚಂದಾದಾರರಾಗಿ, ಪ್ರೋತ್ಸಾಹಿಸಿ. ಪತ್ರಿಕೆಯನ್ನು ಬೆಳೆಸಿ.

| | |
|---|---|
| ಎರಡು ವರ್ಷದ ಸದಸ್ಯತ್ವಕ್ಕೆ | ರೂ. 301/- |
| ಐದು ವರ್ಷದ ಸದಸ್ಯತ್ವಕ್ಕೆ | ರೂ. 751/- |
| ಹತ್ತು ವರ್ಷಗಳ ಸದಸ್ಯತ್ವಕೆ | ರೂ. 1,501/- |
| ಆಜೀವ ಸದಸ್ಯತ್ವ | ರೂ. 5,001/- |
| ಪೋಷಕ ಸದಸ್ಯತ್ವ | ರೂ. 10,001/- |
| ಮಹಾಪೋಷಕ ಸದಸ್ಯತ್ವ | ರೂ. 25,001/- |

Bank Account Details
State Bank of Mysore
Vijay Nagar Branch
Current A/c - Mahila Vishesha
C.A. No. 64183295918

**ಕಛೇರಿ ವಿಳಾಸ:**

**ಮಹಿಳಾ ವಿಶೇಷ,** ಕನ್ನಡ ತಿಂಗಳ ಪತ್ರಿಕೆ

ನಂ. 136, ಶ್ರೀ ನೀಲಕಂಠ ಮಠ, ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲ,
ಮೈಸೂರು-570 004. ಫೋ: 88803-34444/92435-84444
E-mail: mahilavishesha@yahoo.com
Web: www.mahilavishesha.in

**Kind Attn. to the Donors/Subscribers**

Mahila Vishesha Balaga requesting you to all those who are interested to donate or subscribe please contact and encourage to run the magazine smoothly. Please pass it on this message to your friends and others. Please oblige.

***Mahila Vishesha Balaga***

**ನಗೆಹನಿ**

ಉಪಾಧ್ಯಾಯ: ಗುಂಡಾ, ಹಾಲು ಕೆಡದೇ ಇರಬೇಕೆಂದರೆ ಏನು ಮಾಡಬೇಕು?
ಗುಂಡ: ಹಾಲನ್ನು ಕರೆಯದೆ ಹಸುವಿನಲ್ಲೇ ಬಿಡಬೇಕು ಸಾರ್!

ಉಪಾಧ್ಯಾಯ: ಪುಟ್ಟಾ, ನೀನು ಹೇಳು ಈ ಭೂಪಟದಲ್ಲಿ ಹಿಂದೂ ಮಹಾಸಾಗರ ಎಲ್ಲಿದೆ ಅಂತ?
ಪುಟ್ಟ: ಅದು ಇಲ್ಲಿ ಇಲ್ಲ ಸಾರ್, ಇದ್ದಿದ್ರೆ ಭೂಪಟವೆಲ್ಲ ಹರಿದು ಚಿಂದಿಯಾಗುತ್ತಿತ್ತು ಸಾರ್!



# ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳಾಮಣಿಗಳಿಗೊಂದು ಸಲಾಂ



ಮೈಸೂರು ಅರಸರ ರಾಜವಂಶಕ್ಕೆ ಹೊಸದಾಗಿ ಸೇರ್ಪಡೆಗೊಂಡ ಶ್ರೀಮತಿ ತ್ರಿಷಿಕಾ ಕುಮಾರಿ. ಇವರು ಈಗ ಮೈಸೂರು ರಾಜಮನೆತನದ ಸೊಸೆ. ಮಹಿಳೆಯರ ಬಗ್ಗೆ ವಿಶೇಷ ಆಸಕ್ತಿ ವಹಿಸಲಿ.

ಕು. ಅನುಶ್ರೀ ನೋಡ್ತಾ ನೋಡ್ತಾ ಬೆಳೆದು ಬಂದು ದೊಡ್ಡ ಹೆಸರನ್ನು ಮಾಡಿರುವ ಟೀವಿ ಆಂಕರ್. ಕಾರ್ಯಕ್ರಮ ಗಳಲ್ಲಿ ಮಹಿಳೆಯರಿಗೆ ಉತ್ತೇಜನ ನೀಡಲಿ.





ಶ್ರೀಮತಿ ರಾಧಾ ಹಿರೇಗೌಡರ್ ಪಬ್ಲಿಕ್ ಟೀವಿಯಲ್ಲಿ ಕೆಲಸ ಮಾಡುತ್ತಿರುವ ನುರಿತ ಆಂಕರ್ ಹಾಗೂ ಉತ್ತಮ ವಿಶ್ಲೇಷಕಿ. ಮಹಿಳೆಯರ ಬಗ್ಗೆ ಸಾಕಷ್ಟು ಉತ್ತಮ ಕಾರ್ಯಕ್ರಮಗಳನ್ನು ಸಾದರ ಪಡಿಸಲಿ.

ಶ್ರೀಮತಿ ಉಮಾಶ್ರೀ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಶಿಶು ಇಲಾಖೆಯ ಸಚಿವರು. ರಾಜ್ಯದ ಮಹಿಳೆಯರಿಗೆ ನೇರವಾಗಿ ಸೌಲಭ್ಯಗಳು ದೊರೆಯು ವಂತೆ ಕಾರ್ಯ ನಿರ್ವಹಿಸಲಿ.





ಶ್ರೀಮತಿ ಕಮಲಾ ಕರಿಕಾಳನ್, ಸಿಇಓ, ಮೈಸೂರು ಮೃಗಾಲಯ, ಸರ್ಕಾರಿ ಅಧಿಕಾರಿ ಕನ್ನಡವನ್ನು ಸಲೀಸಾಗಿ ಮಾತಾಡಬಲ್ಲರು. ಕೆಲಸದಲ್ಲಿ ಶ್ರದ್ಧೆ ಹಾಗೂ ಪ್ರಾಮಾಣಿಕರು. ಮಹಿಳೆಯರಿಗೆ ಹೆಚ್ಚು ಉತ್ತೇಜನವನ್ನು ನೀಡಲಿ.

ಯುಗಾದಿ ಹಬ್ಬದ ಶುಭಾಶಯಗಳು

॥ ಶ್ರೀ ಹುಲಗಾದ್ರಿ ಕೃಪ ॥

**ಹೆಚ್.ವಿ. ಭಾಸ್ಕರ್**

ಉಪಾಧ್ಯಕ್ಷರು
ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ
ಎನ್. ಮಾಧವರಾವ್ ವೃತ್ತ, ಅಗ್ರಹಾರ,
ಕೆ.ಆರ್. ಮೊಹಲ್ಲಾ, ಮೈಸೂರು

ಮನೆ: ನಂ. 18, ವಿ.ಡಿ. ರಾಜಾರಾಮ್ ಅಗ್ರಹಾರ
11ನೇ ಕ್ರಾಸ್, ರಾಮಾನುಜ ರಸ್ತೆ
ಮೈಸೂರು 570 004.
ಮೊ.: 94489-78493 / 91416-60778

ಯುಗಾದಿ ಹಬ್ಬದ ಶುಭಾಶಯಗಳು

**ವೇದಮಾತಾ ಗಾಯತ್ರೀ ಪ್ರತಿಷ್ಠಾನ**
**ಅರ್ಕಗಣಪತಿ ಜ್ಯೋತಿಷ್ಯ ಕೇಂದ್ರ**

ಎಲ್ಲಾ ಶಾಂತಿ, ಪೂಜೆ, ಪ್ರತಿಷ್ಠಾಪನಾ ಕಾರ್ಯಗಳನ್ನು ಉಪನಯನ, ವಿವಾಹ ಮಾಡಿಸಲಾಗುತ್ತದೆ. ವಾಸ್ತು ನೋಡಲಾಗುತ್ತದೆ. ಸರ್ಪಶಾಂತಿ ಮತ್ತು ಆಶ್ಲೇಷ ಬಲಿ ಮಾಡಿಸಲಾಗುತ್ತದೆ.

**ವಿದ್ವಾನ್ ಕೆ. ವಿಶ್ವನಾಥ ಭಟ್ಟ,** ಎಂ.ಎ., ಬಿ.ಎಡ್.
ಶೈವಾಗಮ ಪ್ರವೀಣ ಮತ್ತು ವಾಸ್ತು ತಜ್ಞರು
ನಂ. 2212, 4ನೇ ಕ್ರಾಸ್, ಬಸವೇಶ್ವರ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು-4.
Mob.: 94486-09160 E-mail: kvbhat.arkaganapathy@gmail.com




MARCH, 2017 MAHILA VISHESHA
Decl No. MAG (Declaration)/16/2016-17


ನಾಡಿನ ಜನತೆಗೆ ಮಹಿಳಾ ದಿನಾಚರಣೆ ಹಾಗೂ
ಯುಗಾದಿ ಹಬ್ಬದ ಶುಭಾಶಯಗಳು




**KARNATAKA SAREE CENTRE**
955, Zoo Main Road, Ittigegud, Mysore-570 010.
Ph: 0821-2521927, 2433985
E-mail: karnatakasareecentre@gmail.com


Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, Decl No. MAG (Declaration)/16/2016-17

ತೆರೆದ ಅಂಚೆ